ಆರ್ಥಿಕ ಅಭಿವೃದ್ಧಿಯಲ್ಲಿ ಸ್ತ್ರೀ ಶಕ್ತಿ ಯೋಜನೆಯ ಕುರಿತು ಒಂದು ಸಮಾಜ ಶಾಸ್ತ್ರೀಯ ಅಧ್ಯಯನ

(ಸಮಾಜಶಾಸ್ತ್ರ ವಿಷಯದಲ್ಲಿ ಎಂ.ಫಿಲ್ ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಶೋಧನ ಪ್ರಬಂಧ)

ಸಂಶೋಧಕರು :
ಶ್ರೀಮತಿ. ಇಂದುಮತಿ ಲಿಂಗರಾಜ ಹಾವೇರಿ
ಸಮಾಜಶಾಸ್ತ್ರದ ಉಪನ್ಯಾಸಕರು
ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ,
ಉಗಾರ ಖುರ್ದ, ಜಿ. ಬೆಳಗಾವಿ

ನೋಂದಣಿ ಸಂಖ್ಯೆ : BRDH / D008

ಮಾರ್ಗದರ್ಶಕರು :
ಡಾ. ಎಸ್. ಓ. ಹಲಸಗಿ
ಶಿವಾನಂದ ಪದವಿ ಮಹಾವಿದ್ಯಾಲಯ,
ಕಾಗವಾಡ ಜಿ. ಬೆಳಗಾವಿ

ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರ, ಹಾರೂಗೇರಿ
ತಾ : ರಾಯಬಾಗ, ಜಿ. ಬೆಳಗಾವಿ

ಮಾನ್ಯತೆ: ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩೨೭೬

೨೦೧೨

ಆರ್ಥಿಕ ಅಭಿವೃದ್ಧಿಯಲ್ಲಿ ಸ್ತ್ರೀ ಶಕ್ತಿ ಯೋಜನೆಯ ಕುರಿತು ಒಂದು ಸಮಾಜ ಶಾಸ್ತ್ರೀಯ ಅಧ್ಯಯನ

(ಸಮಾಜಶಾಸ್ತ್ರ ವಿಷಯದಲ್ಲಿ ಎಂ.ಫಿಲ್ ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಶೋಧನ ಪ್ರಬಂಧ)

ಸಂಶೋಧಕರು :
ಶ್ರೀಮತಿ. ಇಂದುಮತಿ ಲಿಂಗರಾಜ ಹಾವೇರಿ
ಸಮಾಜಶಾಸ್ತ್ರದ ಉಪನ್ಯಾಸಕರು
ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ,
ಉಗಾರ ಖುರ್ದ, ಜಿ. ಬೆಳಗಾವಿ
ನೋಂದಣಿ ಸಂಖ್ಯೆ : BRDH / D008

ಮಾರ್ಗದರ್ಶಕರು :
ಡಾ. ಎಸ್. ಓ. ಹಲಸಗಿ
ಶಿವಾನಂದ ಪದವಿ ಮಹಾವಿದ್ಯಾಲಯ,
ಕಾಗವಾಡ ಜಿ. ಬೆಳಗಾವಿ

ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರ, ಹಾರೂಗೇರಿ
ತಾ : ರಾಯಬಾಗ, ಜಿ. ಬೆಳಗಾವಿ

ಮಾನ್ಯತೆ: ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩೨೭೬

೨೦೧೨

ಪ್ರಮಾಣ ಪತ್ರ

"ಆರ್ಥಿಕ ಅಭಿವೃದ್ಧಿಯಲ್ಲಿ ಸ್ತ್ರೀ ಶಕ್ತಿ ಯೋಜನೆಯ ಕುರಿತು ಒಂದು ಸಮಾಜ ಶಾಸ್ತ್ರೀಯ ಅಧ್ಯಯನ" ಎಂಬ ಶೀರ್ಷಿಕೆಯ ಈ ಸಪ್ರಬಂಧವನ್ನು **ಡಾ. ಎಸ್. ಓ. ಹಲಸಗಿ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುವೆ. ಹಾರೂಗೇರಿಯ ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಮಾಜಶಾಸ್ತ್ರ ವಿಷಯದಲ್ಲಿ ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿರುವೆ. ಪ್ರಸ್ತುತ ಸಪ್ರಬಂಧವನ್ನು ಈ ಮೊದಲು ಇಡಿಯಾಗಿಯಾಗಲಿ ಅಥವಾ ಬಿಡಿಯಾಗಿಯಾಗಲಿ ಪ್ರಕಟಿಸಿರುವುದಿಲ್ಲ ಹಾಗೂ ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ : ಹಾರೂಗೇರಿ
ದಿನಾಂಕ: /೦೬/೨೦೧೨

ಶ್ರೀಮತಿ. ಇಂದುಮತಿ ಲಿಂಗರಾಜ ಹಾವೇರಿ
ಸಂಶೋಧನಾ ವಿದ್ಯಾರ್ಥಿ
ಸಮಾಜ ಶಾಸ್ತ್ರದ ಉಪನ್ಯಾಸಕರು
ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ,
ಉಗಾರ ಖುರ್ದ, ಜಿ. ಬೆಳಗಾವಿ

ದೃಢೀಕರಣ ಪತ್ರ

ಶ್ರೀಮತಿ. ಇಂದುಮತಿ ಅಂಗರಾಜ ಹಾವೇರಿ ಇವರು **"ಆರ್ಥಿಕ ಅಭಿವೃದ್ಧಿಯಲ್ಲಿ ಸ್ತ್ರೀ ಶಕ್ತಿ ಯೋಜನೆಯ ಕುರಿತು ಒಂದು ಸಮಾಜ ಶಾಸ್ತ್ರೀಯ ಅಧ್ಯಯನ"** ಎಂಬ ಸಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ದಪಡಿಸಿದ್ದಾರೆ. ಹಾರೂಗೇರಿಯ ಶ್ರೀ ಬಿ.ಆರ್. ದರೂರ ಸಂಶೋಧನಾ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಮಾಜಶಾಸ್ತ್ರ ವಿಷಯದಲ್ಲಿ ಎಂ.ಫಿಲ್. ಪದವಿಗೆ ಸಲ್ಲಿಸುತ್ತಿರುವ ಪ್ರಸ್ತುತ ಸಪ್ರಬಂಧವನ್ನು ಇವರು ಈ ಮೊದಲು ಇಡಿಯಾಗಿಯಾಗಲಿ ಅಥವಾ ಬಿಡಿಯಾಗಿಯಾಗಲಿ ಎಲ್ಲಿಯೂ ಪ್ರಕಟಿಸಿಲ್ಲ ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದೂ ಈ ಮೂಲಕ ದೃಢೀಕರಿಸುತ್ತೇನೆ.

ಸ್ಥಳ : ಹಾರೂಗೇರಿ

ದಿನಾಂಕ: /೦೬/೨೦೧೨

ಡಾ. ಎಸ್. ಓ. ಹಲಸಗಿ

ಮಾರ್ಗದರ್ಶಕರು
ಶಿವಾನಂದ ಪದವಿ ಮಹಾವಿದ್ಯಾಲಯ,
ಕಾಗವಾಡ ಜಿ. ಬೆಳಗಾವಿ

ಪರಿವಿಡಿ

ಅಧ್ಯಾಯ – ಒಂದು :

ಸ್ತ್ರೀ ಶಕ್ತಿ ಯೋಜನೆ

ಅಧ್ಯಾಯ – ಒಂದು :

ಸ್ತ್ರೀ ಶಕ್ತಿ ಯೋಜನೆ

"ತಮಸೋಮಾ ಜ್ಯೋತಿರ್ಗಮಯ" ಎಂಬಂತೆ ಗ್ರಾಮೀಣ ಸಮುದಾಯದ ಬಡ ಮಹಿಳೆಯರನ್ನು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ " ಸ್ತ್ರೀ ಶಕ್ತಿ" ಯೋಜನೆ ಎಂಬ ಜ್ಯೋತಿಯ ಸಹಾಯದಿಂದ ಅವರನ್ನು ಆರ್ಥಿಕವಾಗಿ, ಸಾಮಾಜಿಕವಾಗಿ ಮೇಲೆತ್ತುವ ಕಾರ್ಯವನ್ನು ಕರ್ನಾಟಕ ಸರ್ಕಾರ ಮಾಡುತ್ತಿದೆ. ಈ ಯೋಜನೆಗೂ ಮುನ್ನ ರಾಜ್ಯದಲ್ಲಿಯ ಮಹಿಳೆಯರು ಕೇವಲ " ಹೆಣ್ಣು ಪುರುಷನಷ್ಟೇ ಸಮಾನತೆಯನ್ನು" ಪಡೆದಿದ್ದಾಳೆ ಎಂಬ ಘೋಷಣೆಗೆ ಮಾತ್ರ ಅವಳನ್ನು ಸಮಾನಳು ಎಂದು ಕರೆಯಲಾಗುತಿತ್ತು.

ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆ ರಾಜ್ಯಾದ್ಯಂತ ಸ್ತ್ರೀಶಕ್ತಿ ಯೋಜನೆಯನ್ನು ಜಾರಿಗೊಳಿಸುತ್ತಿರುವುದು ಬಹಳ ಪ್ರಶಂಸನೀಯ ಕಾರ್ಯವಾಗಿದೆ. ಸ್ತ್ರೀಶಕ್ತಿ ಯೋಜನೆಯು ರಚನೆಯಾಗಿ ಅಸ್ತಿತ್ವದಲ್ಲಿ ಇದ್ದರೂ ಕೂಡಾ ಒಂದು ವ್ಯಾಪಕ ಸ್ವರೂಪವನ್ನು ಕೊಡಬೇಕಾಗಿದೆ.

ರಚನೆಯಾಗಿರುವ ಈ ಗುಂಪುಗಳನ್ನು ಇನ್ನು ಬಲವರ್ಧನೆಗೊಳಿಸಬೇಕಾಗಿದೆ. ಈ ದಿಶೆಯಲ್ಲಿ ಪುನಶ್ಚೇತನ ತರಬೇತಿಯ ಮೂಲಕ ಕ್ಷೇತ್ರ ಮಟ್ಟದ ಅಧಿಕಾರಿಗಳು, ಸಿಬ್ಬಂದಿ ವರ್ಗದವರು ಹಾಗೂ ಅಂಗನವಾಡಿ ಕಾರ್ಯಕರ್ತೆಯರ ಕೌಶಲ್ಯತೆಯನ್ನು ಹೆಚ್ಚಿಸುವ ಮತ್ತು ಸ್ತ್ರೀಶಕ್ತಿ ಗುಂಪಿನ ಪ್ರತಿ ಮಹಿಳೆಯನ್ನು ಸಬಲೀಕರಣ ಮಾಡುವ ಉದ್ದೇಶ ಹೊಂದಿದೆ.

ಆದರೆ ನಿಜವಾಗಿ ಪುರುಷನಷ್ಟೆ ಸಮಾನತೆಯನ್ನು ಪಡೆದುಕೊಂಡದ್ದು ಈ ಸ್ತ್ರೀ ಶಕ್ತಿ ಯೋಜನೆಯ ಮುಖಾಂತರವೇ ಎಂದು ಹೇಳಬಹುದು.

ಲಿಂಗತಾರತಮ್ಯತೆ ಅಸಮಾನತೆ, ಅನರ್ಹತೆ ಹಾಗೂ ಇನ್ನಿತರ ಬಗೆಯ ಸಂಕಷ್ಟಗಳಿಗೆ ಒಳಗಾಗಿರುವ ಸ್ತ್ರೀಯರಿಗೂ ಕೂಡ ಪುರುಷರಿಗೆ ಸರಿಸಮಾನವಾದ ಅಂತಸ್ತು ಹಾಗೂ ಅವಕಾಶಗಳನ್ನು ನೀಡಿ ಅವರನ್ನು ಸಶಕ್ತರನ್ನಾಗಿಸಲು ಹಮ್ಮಿಕೊಳ್ಳಲಾಗಿರುವ ಅಭಿವೃದ್ಧಾತ್ಮಕ ಕಾರ್ಯಯೋಜನೆಗಳ ಪ್ರಕ್ರಿಯೆಯನ್ನು ಸ್ತ್ರೀ ಶಕ್ತಿ ಎಂದೆನ್ನಬಹುದು. ಮಹಿಳಾ ಸಶಕ್ತಿಕರಣ ವೆಂದರೆ ಸ್ತ್ರೀಯರಿಗೆ ತಮ್ಮ ಜೀವನವನ್ನು ನಿಯಂತ್ರಿಸುತ್ತಾ ಬಂದಿರುವ ಇತರರಿಂದ ಮುಕ್ತಿ ಪಡೆದುಕೊಳ್ಳಲು ಹಾಗೂ ತಮ್ಮ ಜೀವನವನ್ನು ಮತ್ತು ಅದಕ್ಕೆ ಸಂಬಂಧಿಸಿದ ಪರಿಸ್ಥಿತಿಗಳನ್ನು ತಾವೇ ನಿಯಂತ್ರಿಸಿಕೊಳ್ಳಲು ಸೂಕ್ತವಾದ ಶಕ್ತಿಯನ್ನು ನೀಡುವುದೆಂದರ್ಥ.

ಸ್ತ್ರೀಯರ ಶೋಷಣೆ ನಿಂತು ಅವರು ಪುರಷರಿಗೆ ಸರಿಸಮಾನವಾಗಿ ಜೀವಿಸುವಂತಹ ಪರಿಸ್ಥಿತಿ ನಿರ್ಮಾಣವಾಗಬೇಕೆಂಬ ಹಂಬಲ ವಿಶ್ವರಾಷ್ಟ್ರ ಸಂಸ್ಥೆಯ ಮೂಲಕ ಪ್ರಕಟವಾಗುತ್ತಲೇ ಇತ್ತು. ೧೯೭೫ ರ ವರ್ಷವನ್ನು ಅದು "ಅಂತಾರಾಷ್ಟ್ರೀಯ ಮಹಿಳಾ ವರ್ಷ" ವೆಂದು ಘೋಷಿಸಿದಾಗ ಅದರ ಕೆಲವು ಸದಸ್ಯ ರಾಷ್ಟ್ರಗಳು ಸ್ತ್ರೀಯರ ಕಡೆಗೆ ವಿಶೇಷ ದೃಷ್ಟಿ ಹರಿಸಿದವು. ಇದುವರೆವಿಗೂ ಕೇವಲ ಸ್ತ್ರೀಯರ ಸಮಸ್ಯೆಗಳ ನಿವಾರಣೆಗಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದ ದೇಶಗಳು ಅವರ 'ಅಭಿವೃದ್ಧಿ' ಯ ಕಡೆಗೆ ತಮ್ಮ ಲಕ್ಷವನ್ನು ಹರಿಸಬೇಕೆಂದು ತಿಳಿಸಲಾಯಿತು.

ಸ್ತ್ರೀಯರನ್ನು ಅದರಲ್ಲೂ ಗ್ರಾಮೀಣ ಭಾಗದಲ್ಲಿರುವ ಸ್ತ್ರೀಯರನ್ನು ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಸಶಕ್ತರನ್ನಾಗಿಸಲು ಸ್ವ-ಸಹಾಯ ಸಮೂಹಗಳನ್ನು ಸ್ಥಾಪಿಸಿ ಅಂತಹ ಸಮೂಹಗಳಲ್ಲಿ ಅವರು ಸಕ್ರಿಯವಾಗಿ ಪಾಲುಗೊಳ್ಳುವಂತೆ ಮಾಡುವುದು ಸೂಕ್ತವೆಂಬ ಪರಿಣಿತರ ಸಲಹೆಯನ್ನು ಭಾರತ ಸರ್ಕಾರವಿಂದು ಒಪ್ಪಿಕೊಂಡಿದೆ. ಅಂತಹ ಸಮೂಹಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಸ್ಥಾಪಿಸಿ ಚಿಕ್ಕ ಮಟ್ಟದ ಆರ್ಥಿಕ ಮೂಲಗಳನ್ನು ದೊಡ್ಡ ಸಂಖ್ಯೆಯಲ್ಲಿ ಗ್ರಾಮಸ್ಥರಿಗೆ

ಒದಗಿಸುವ ಮೂಲಕ ಸಾಮಾಜಿಕ ಆರ್ಥಿಕ ಅಭಿವೃದ್ಧಿಗೆ ಚಾಲನೆ ನೀಡಬಹುದೆಂಬುದನ್ನು ಅದು ಅರ್ಥವಿಸಿಕೊಂಡಂತಿದೆ. ಅಂತೆಯೇ ಅಂತಹ ಸಮೂಹಗಳ ಸ್ಥಾಪನೆಯ ಬಗ್ಗೆ ವಿಶೇಷ ಒತ್ತು ನೀಡಲಾಗುತ್ತಿದೆ.

ಸ್ವ-ಸಹಾಯ ಸಮೂಹಗಳು ದಕ್ಷಿಣ ಏಷ್ಯಾ, ಬಾಂಗ್ಲಾದೇಶ ಮತ್ತು ಕೀನ್ಯಾಗಳಲ್ಲಿ ಆಗಲೇ ಯಶಸ್ವಿಯಾಗಿ ಚಾಲನೆಗೆ ಬಂದಿದ್ದು ಅಂತಹ ಪ್ರಯೋಗವನ್ನು ಭಾರತದಲ್ಲಿಯೂ ಮಾಡುವ ಉದ್ದೇಶದಿಂದಲೇ ಅವು ಜಾರಿಗೆ ಬಂದಿವೆ. ಇವುಗಳನ್ನು "ಸೂಕ್ಷ್ಮ ಹಣಕಾಸು ಉದ್ಯಮದ ನವೀನ ರೂಪಗಳು" ಎಂದರೂ ಸಲ್ಲುವುದು. ಇಂತಹ ಗುಂಪುಗಳ ರಚನೆಯ ಮೂಲಕ ಅವುಗಳ ಸದಸ್ಯರುಗಳನ್ನು ಆರ್ಥಿಕವಾಗಿ ಸಬಲರನ್ನಾಗಿ ಹಾಗೂ ಸ್ವಾವಲಂಬಿಗಳನ್ನಾಗಿ ಮಾಡುವ ಉದ್ದೇಸ "ಸ್ವ-ಸಹಾಯ ಸಮೂಹ" ದ ಪರಿಕಲ್ಪನೆಯ ಹಿನ್ನೆಲೆಯಲ್ಲಿದೆ ಎನ್ನಬಹುದು.

ಸ್ತ್ರೀಶಕ್ತಿ ಗುಂಪುಗಳು ಮೂಲಭೂತವಾಗಿ ಉಳಿತಾಯ ಹಾಗೂ ಸಾಲ ನಿರ್ವಹಣೆ ಕಾರ್ಯಗಳಲ್ಲಿ ತೊಡಗುವ ಮೂಲಕ ತಮ್ಮ ಸದಸ್ಯರಿಗೆ ಸಮಾಜದಲ್ಲಿ ಸಕಾರಾತ್ಮಕ ಪಾತ್ರ ವಹಿಸಲು ಅವಕಾಶ ಒದಗಿಸುತ್ತಿವೆ. ಆದ್ದರಿಂದ ಯಾವ ಗುಂಪಿನಲ್ಲಿ ಹಣಕಾಸಿನ ನಿರ್ವಹಣೆ ಉತ್ತಮವಾಗಿರುತ್ತದೆಯೋ ಆ ಗುಂಪಿನ ಸದಸ್ಯರ ಏಳಿಗೆ ನಿಶ್ಚಿತ. ಈ ತರಬೇತಿಯ ಮೂಲಕ ಸ್ತ್ರೀಶಕ್ತಿ ಗುಂಪುಗಳಲ್ಲಿ ಹಣಕಾಸಿನ ವ್ಯವಹಾರಗಳನ್ನು ಬಲಪಡಿಸಿ ಗುಂಪನ್ನು ಸುಸ್ಥಿರಗೊಳಿಸಲು ಇಚ್ಛಿಸುತ್ತಿವೆ.

ಸ್ತ್ರೀಶಕ್ತಿ ಕೈಪಿಡಿಯನ್ನು ಯಾರಿಗಾಗಿ ತಯಾರಿಸಲಾಗಿದೆ ಎಂದರೆ ಗುಂಪಿನ ಸರ್ವ ಸದಸ್ಯರಿಗೆ ತರಬೇತಿ ನೀಡಲು ಉಪಯೋಗಿಸಬಹುದು ಗುಂಪಿನ ಸದಸ್ಯರು ಕೂಡ ಬೇಕಾದಾಗ ಕೈಪಿಡಿಯನ್ನು ತಾವೇ ಓದಿ ವಿಷಯಗಳನ್ನು ತಿಳಿಯಬಹುದು. ಉದಾಹರಣೆ :- ಗುಂಪಿನ ಹಣಕಾಸಿನ ವ್ಯವಹಾರ ಚೆನ್ನಾಗಿದ್ದು ಲೆಕ್ಕ ಪತ್ರಗಳ ನಿರ್ವಹನೆಯಲ್ಲಿ ಮಾತ್ರ ಕೊರತೆಗಳಿದ್ದರೆ ಲೆಕ್ಕ ಪತ್ರಗಳ ನಿರ್ವಹಣೆಯ ಬಗ್ಗೆ ತರಬೇತಿ ಪ್ರಾರಂಭದಲ್ಲಿ ಗುಂಪಿನ ಬಗ್ಗೆ ಸ್ವಲ್ಪ ಮಾಹಿತಿ ತಿಳಿದುಕೊಳ್ಳುವುದು ಅಗತ್ಯ.

ಸ್ತ್ರೀಶಕ್ತಿ ಗುಂಪುಗಳಲ್ಲಿ ತರಬೇತಿಗಳನ್ನು ಕೈಗೊಳ್ಳಲಾಗುತ್ತದೆ. ಅವುಗಳೆಂದರೆ ಗುಂಪು ಚರ್ಚೆ, ಪ್ರಶ್ನೋತ್ತರ, ಕಥೆ ಹೇಳುವುದು, ಆಟಗಳು, ಯೋಜನಾ ಕ್ರಿಯೆ ಇಲ್ಲಿ ಮುಂತಾದ ಕ್ರಮಗಳನ್ನು ಕೈಗೊಳ್ಳುವುದು.

ಸ್ತ್ರೀಶಕ್ತಿ ಗುಂಪುಗಳನ್ನು ರಚಿಸಿದ್ದ ಉದ್ದೇಶ ಒಗ್ಗಟ್ಟಿನಿಂದ ಕಾರ್ಯ ನಿರ್ವಹಿಸಲು ಬಡತನದಿಂದ ಹೊರಬರಲು ಉಳಿತಾಯ ಮಾಡಲು ಕಡಿಮೆ ಬಡ್ಡಿಯ ಸಾಲ ಪಡೆಯಲು ತಿಳುವಳಿಕೆ ಹೊಂದಲು ಧೈರ್ಯವಂತರಾಗಲು ಇತ್ಯಾದಿ ಗುಂಪಿನ ಗುರಿ ಸದಸ್ಯರ ಜೀವನ ಮಟ್ಟವನ್ನು ಸುಧಾರಿಸಲು ಸದಸ್ಯರಿಗೆ ಬ್ಯಾಂಕ ಸಾಲದ ಸೌಲಭ್ಯ ಒದಗಿಸಲು ಸದಸ್ಯರ ಮತ್ತು ಗ್ರಾಮದ ಸರ್ವತೋಮುಖ ಅಭಿವೃದ್ಧಿಗಾಗಿ ಮತ್ತು ಗುಂಪಿನ ಚಟುವಟಿಕೆಗಳೆಂದರೆ ಸಭೆ ಸೇರುವುದು, ಉಳಿತಾಯ ಮಾಡುವುದು, ಸಾಲ ಕೊಡುವುದು, ಮರುಪಾವತಿ ಮಾಡುವುದು. ಸಾರ್ವಜನಿಕ ವಿಷಯಗಳ ಬಗ್ಗೆ ಚರ್ಚೆ ಮಾಡುವುದು ಇತ್ಯಾದಿ.

ಸ್ತ್ರೀಶಕ್ತಿ ಗುಂಪಿನಲ್ಲಿ ಉಳಿತಾಯವನ್ನು ಏಕೆ ಮಾಡಬೇಕೆಂದರೆ ಕಷ್ಟಕಾಲದಲ್ಲಿ ಖರ್ಚಿಗೆ ಮತ್ತು ಅನಾರೋಗ್ಯ, ಊಟಕ್ಕೆ, ಮನೆಯಲ್ಲಿ ಹುಟ್ಟು, ಸಾವು, ಮದುವೆ ವೆಚ್ಚಕ್ಕೆ, ಮಕ್ಕಳ ವಿದ್ಯಾಭ್ಯಾಸಕ್ಕೆ ಮನೆಕಟ್ಟಲು, ಹಸು, ಆಡು-ಕುರಿ ಕೊಳ್ಳಲು ಇತ್ಯಾದಿ.

ಬಡತನದಿಂದ ಮೇಲೇಳುವವರ ಸೂತ್ರ ಆದಾಯ – ಉಳಿತಾಯ = ಖರ್ಚು ಇಂತವರು ಆದಷ್ಟು ಉಳಿತಾಯ ಮಾಡಿ ಉಳಿದ ಹಣದಲ್ಲಿ ಜೀವನ ನಡೆಸಲು ಪ್ರಯತ್ನಿಸುತ್ತಾರೆ. ಹೀಗೆ ಬದುಕಲು ಕಷ್ಟವಾದ್ದರಿಂದ ತ್ಯಾಗ ಮನೋಭಾವ ಬೇಕಾಗುತ್ತದೆ ಎಂಬುದನ್ನು ದುಂದುವೆಚ್ಚ ಮಾಡದೆ, ಅನಗತ್ಯ ಖರ್ಚನ್ನು ತಡೆಗಟ್ಟುವವರ ಭವಿಷ್ಯ ಸುಖಮಯವಾಗುತ್ತದೆ.

ಬಡವರ ಮನೆಗಳಲ್ಲಿ ಆದಾಯಗಿಂತ ಖರ್ಚು ಹೆಚ್ಚಾಗಿರುವುದರಿಂದ – ತ್ಯಾಗ ಮಾಡಿಯೇ ಉಳಿತಾಯ ಮಾಡಲು ಸಾಧ್ಯ. ಹಲವು ಮನೆಗಳಲ್ಲಿ ಮಹಿಳೆಯರು ಬಂದು ಹಿಡಿ ಅಕ್ಕಿಯನ್ನು ದಿನದ ಅಡಿಗೆಯಿಂದ ತೆಗೆದು ಬೇರೆ ಇಡುತ್ತಾರೆ. ಒಂದು ಗುಂಪಿನ ಸದಸ್ಯರ

ವಾರಕ್ಕೊಮ್ಮೆ ಯಾವುದಾದರೂ ತೋಟದಲ್ಲಿ ಕೂಲಿ ಕೆಲಸ ಮಾಡಿ ಬಂದ ಹಣವನ್ನೆಲ್ಲ ಉಳಿತಾಯ ಮಾಡುತ್ತಾರೆ.

ಮೇಲಿನ ಉದಾಹರಣೆಗಳಿಂದ ತಿಳಿದು ಬರುವುದೇನೆಂದರೆ ಉಳಿತಾಯ ಮಾಡುವ ಹಂಬಲವಿರುವವರು ಹೇಗಾದರು ದಾರಿ ಹುಡುಕುತ್ತಾರೆ ! ಸದಸ್ಯರು ಒಂದೇ ಸಲ ಹೆಚ್ಚು ಪ್ರಮಾನದ ಉಳಿತಾಯ ಮಾಡಬೇಕಾಗಿಲ್ಲ. ಆದರೆ ಬಿಡದೆ ನಿಷ್ಠೆಯಿಂದ ಸಾಧ್ಯವಾದ ಮತ್ತು ನಿರಂತರ ಉಳಿತಾಯ ಮಾಡವುದು ಮುಖ್ಯ.

ಸ್ತ್ರೀಶಕ್ತಿ ಯೋಜನೆಯು ದಿನಾಂಕ ೧೮-೧೦-೨೦೦೦ ರಂದು ರಾಯಚೂರಿನಲ್ಲಿ ವಿದ್ಯುಕ್ತವಾಗಿ ಉದ್ಘಾಟನೆಗೂಂಡಿತು. ಈ ೧೩ ವರ್ಷದ ಅವಧಿಯಲ್ಲಿ ಸ್ತ್ರೀಶಕ್ತಿ ಗುಂಪಿನ ಮಹಿಳೆಯರು ಸಾವಿರಾರೂ ರೂಪಾಯಿಗಳ ಉಳಿತಾಯವನ್ನು ಮಾಡಿದ್ದಾರೆಂದರೆ ಹೆಮ್ಮೆಯ ಸಂಗತಿಯಾಗಿದೆ. ಉಗಾರ ಖುರ್ದದಲ್ಲಿ ೨೯ ಸ್ತ್ರೀಶಕ್ತಿ ಗುಂಪುಗಳು ೫೮೦ ಮಹಿಳೆಯರು ಸದಸ್ಯತ್ವವನ್ನು ಹೊಂದಿದ್ದಾರೆ ಡಿ.ಸಿ.ಸಿ. ಬ್ಯಾಂಕಿನ ಮುಖಾಂತರ ಸಾಲವನ್ನು ಪಡೆದುಕೂಂಡಿದ್ದಾರೆ ಈ ಸಾಲವನ್ನು ವಿವಿಧ ರೀತೀಯ ಆದಾಯೋತ್ಪನ್ನ ಕಾರ್ಯ ಚಟುವಟಿಕೆಗಳಿಗಾಗಿ ಉಪಯೋಗಿಸಿಕೂಂಡಿದ್ದಾರೆ.

ಹಿಂದಿನಿಂದಲೂ ಸ್ತ್ರೀಶಕ್ತಿ ಗುಂಪುಗಳ ದೃಷ್ಟಿ ಮಹಿಳೆಯರ ಆರ್ಥಿಕ ಮತ್ತು ಸಾಮಾಜಿಕ ಸಶಕ್ತತೆ ಕಡೆ ಇದ್ದರೂ ಸದೃಡವಾಗಿರಲಿಲ್ಲ. ಮಹಿಳೆಯರ ಗುಂಪುಗಳು ಸದೃಡವಾಗಿರಬೇಕಾದರೆ ವಿವಿಧ ಸಂಘ ಸಂಸ್ಥೆಗಳ ಸಹಕಾರ ಮತ್ತು ಸಹಯೋಗ ಬಹಳ ಮುಖ್ಯ ಆ ದಿಶೆಯಲ್ಲಿ ಸ್ತ್ರೀಶಕ್ತಿ

ಗುಂಪುಗಳ ಬಲವರ್ಧನೆಗೆ ಬ್ಯಾಂಕಗಳ ಸಂಬಂಧ ಅತೀ ಅವಶ್ಯ. ಗುಂಪುಗಳಿಗೆ ಭದ್ರಬುನಾದಿಯನ್ನು ಹಾಕಬೇಕಾದರೆ ಬ್ಯಾಂಕಗಳ ಸಂಬಂಧ ಸಂಪರ್ಕವನ್ನು ಪ್ರಮುಖವಾಗಿ ಒದಗಿಸಬೇಕಾಗುತ್ತದೆ. ಈ ದಿಶೆಯಲ್ಲಿ ಗುಂಪಿನ ಪ್ರತಿನಿಧಿಗಳಿಗೆ, ಮತ್ತು ಸದಸ್ಯರಿಗೆ, ಸಾಲ ನಿರ್ವಹಣೆ ಮತ್ತು ಹಣಕಾಸು ನಿರ್ವಹಣೆ ಬಗ್ಗೆ ತರಬೇತಿ ಅತೀ ಅವಶ್ಯಕವಾಗಿದೆ.

ಸ್ತ್ರೀಶಕ್ತಿ ಯೋಜನೆಯು ಉಗಾರ ಖುರ್ದದಲ್ಲಿ ಅನುಷ್ಠಾನಗೊಂಡು ೧೩ ವರ್ಷ ಕಳೆದಿದೆ. ಈ ಅವಧಿಯಲ್ಲಿ ಗ್ರಾಮೀಣ ಮಹಿಳೆಯರ ಸಂಘಟನೆಯಾಗಿದೆ. ಈ ಮಹಿಳೆಯರಲ್ಲಿ ಉಳಿತಾಯ ಮನೋಭಾವ ಮೂಡಿಸವುದರ ಜೊತೆಗೆ ಆಂತರಿಕ ಸಾಲ ಮತ್ತು ಬ್ಯಾಂಕಗಳ ನಿರ್ವಹಣಾ ಸಮಸ್ಯೆಗಳ ಅರಿವು ಮಾಡಿದೆ. ಸಮಸ್ಯೆಗಳ ಮೂಲ ಕಾರಣ ಹುಡುಕುವಲ್ಲಿ ಯಶಸ್ಸು ಪ್ರಯತ್ನಗಳು ಗುಂಪಿನ ಸದಸ್ಯರಿಂದಲೇ ನಡೆದಿವೆ. ಹೀಗಾಗಿ ಅವರಲ್ಲಿ ಹೊಸ ಚೈತನ್ಯ ಮೂಡಿದೆ. ಸ್ತ್ರೀ ಶಕ್ತಿ ಗುಂಪುಗಳ ಪರಿಕಲ್ಪನೆಯು ಗ್ರಾಮೀಣ ಮಹಿಳೆಯರ ನಾಡಿಯಲ್ಲಿ ಮಿಡಿದಿದೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಸ್ತ್ರೀಶಕ್ತಿ ಯೋಜನೆಯನ್ನು ಜಾರಿಗೊಳಿಸಿರುವುದು ಬಹಳ ಪ್ರಶಂಸನೀಯ ಕಾರ್ಯವಾಗಿದೆ. ಉಗಾರ ಖುರ್ದದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ೧೭ ಸ್ತ್ರೀಶಕ್ತಿ ಸಂಘಗಳಿಗೆ ೫೦೦೦/– ಸುತ್ತು ನಿಧಿಯನ್ನು ನೀಡಿದೆ. ಅಷ್ಟೇ ಅಲ್ಲದೇ ೨೯ ಸಂಘಗಳಲ್ಲಿ ಎರಡು ಎಸ್.ಸಿ. ಸಂಘಗಳಿವೆ. ಸ್ತ್ರೀಶಕ್ತಿ ಸಂಘದಲ್ಲಿಯ ಸದಸ್ಯರು ಬಡ್ಡಿಯ ದರವನ್ನು ನಿಗದಿಪಡಿಸುತ್ತಾರೆ ಉಗಾರ ಖುರ್ದದಲ್ಲಿ ಇರುವ ಸಂಘಗಳಿಗೆ ೧.೫೦ ಬಡ್ಡಿ ದರವನ್ನು ನಿಗಧಿಪಡಿಸಲಾಗಿದೆ.

ಉಗಾರ ಖುರ್ದದಲ್ಲಿ ಸ್ತ್ರೀಶಕ್ತಿ ಗುಂಪುಗಳು ರಚನೆಯಾಗಿ ಆಂತರಿಕ ಸಾಲವನ್ನು ೭ ಸಂಘಗಳು ನಿರ್ವಹಿಸಿ ಬ್ಯಾಂಕಿನ ಸಂಬಂಧವನ್ನು ಕಲ್ಪಿಸಿಕೊಂಡು ಈಗ ಆದಾಯೊತ್ಪನ್ನಕರ ಚಟುವಟಿಕೆಗಳನ್ನು ಕೈಗೊಳ್ಳುತ್ತಿವೆ.

ಆದರೂ ಸಹ ಅಂಗನವಾಡಿ ಕಾರ್ಯಕರ್ತೆಯರು ಸ್ತ್ರೀಶಕ್ತಿ ಗುಂಪುಗಳ ರಚನೆಯಲ್ಲಿ ಹೆಚ್ಚಿನ ಪ್ರಯತ್ನವನ್ನು ಮಾಡುವುದು ಅವಶ್ಯಕವಾಗಿದೆ. ಒಡೆಯುತ್ತಿರುವ ಸಂಘಗಳನ್ನು ಮೇಲೆ ಎತ್ತುವ ಕೆಲಸವು ಅಂಗನವಾಡಿ ಕಾರ್ಯಕರ್ತೆಯರದ್ದಾಗಿದೆ. ಅಷ್ಟೇ ಅಲ್ಲದೇ ಸಂಘದ ಸದಸ್ಯರುಗಳು ಬಿಟ್ಟರೆ ಅದಕ್ಕೆ ಕಾರಣವನ್ನು ತಿಳಿಯುವುದು ಅವಶ್ಯಕವಾಗಿದೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಉಗಾರ ಖುರ್ದದಲ್ಲಿ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಸ್ತ್ರೀಶಕ್ತಿ ಸಂಘಗಳನ್ನು ರಚಿಸಲು ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು. ಏಕೆಂದರೆ

ಉಗಾರ ಖುರ್ದದಲ್ಲಿ ಹೆಚ್ಚಿನ ಮಹಿಳೆಯರು ಅನಕ್ಷರಸ್ಥರಾಗಿರುವುದರಿಂದ ಸಂಘದ ಬಗ್ಗೆ ಇನ್ನೂ ಸಹ ಗೊಂದಲಮಯವಾದ ಮನಸ್ಥಿತಿಯಲ್ಲಿಯೇ ಇದ್ದಾರೆ ಎಂದು ಹೇಳಬಹುದು.

ಗ್ರಾಮೀಣ ಪ್ರದೇಶದಲ್ಲಿಯೇ ತರಬೇತಿಗಳನ್ನು ಕೈಗೊಳ್ಳಬೇಕು. ಏಕೆಂದರೆ ಗ್ರಾಮೀಣ ಪ್ರದೇಶದ ಮಹಿಳೆಯರು ಮನೆಯ ಕೆಲಸ ಕಾರ್ಯಗಳು ಮುಗಿದ ನಂತರ ತರಬೇತಿಗಳಲ್ಲಿ ಭಾಗವಹಿಸುವುದು ಹೆಚ್ಚಿನ ಪ್ರಮಾಣದಲ್ಲಿ ಇದ್ದಾರೆ. ಅಷ್ಟೇ ಅಲ್ಲದೇ ಅವರು ತಯಾರಿಸಿದ ವಸ್ತುಗಳಿಗೆ ಮಾರುಕಟ್ಟೆಯ ಸೌಲಭ್ಯವು ಅಷ್ಟೇ ಅವಶ್ಯಕವಾಗಿದೆ. ಮಾರುಕಟ್ಟೆಯ ಸೌಲಭ್ಯ ಇಲ್ಲದೇ ಎಷ್ಟೋ ಮಹಿಳೆಯರು ತಾವು ತಯಾರಿಸಿದ ವಸ್ತುಗಳಿಗೆ ಬೇಡಿಕೆ ಇಲ್ಲದೆ ತೊಂದರೆಯನ್ನು ಅನುಭವಿಸಿದ್ದಾರೆ.

ಉಗಾರ ಖುರ್ದದಲ್ಲಿ ಹೆಚ್ಚಾಗಿ ಹಪ್ಪಳ, ಉಪ್ಪಿನಕಾಯಿ, ಶಾವಿಗೆ, ಕೃತಕ ಆಭರಣ ತಯಾರಿಕೆ, ಹೈನುಗಾರಿಕೆ, ರೊಟ್ಟಿ ತಯಾರಿಕೆ, ಇನ್ನು ಮುಂತಾದ ವಸ್ತುಗಳನ್ನು ತಯಾರಿಸುತ್ತಾರೆ. ಆದರೆ ಅವರಿಗೆ ಸೂಕ್ತವಾದ ಮಾರುಕಟ್ಟೆಯ ಸೌಲಭ್ಯಗಲನ್ನು ಒದಗಿಸಿಕೊಡುವುದು ಅನಿವಾರ್ಯವಾಗಿದೆ.

ಸ್ವ-ಸಹಾಯ ಸಮೂಹಗಳೊಂದಿಗೆ ಬ್ಯಾಂಕಿನ ಸಾಂಸ್ಥಿಕ ಜೋಡಣೆ ನಬಾರ್ಡ ಸಂಸ್ಥೆಯ ಮಾರ್ಗದರ್ಶನ ಹಾಗೂ ಸಂಪೂರ್ಣ ಮೇಲ್ವಿಚಾರಣೆಯಲ್ಲಿ ಸ್ವ-ಸಹಾಯ ಸಮೂಹಗಳನ್ನು ಬ್ಯಾಂಕಿನೊಂದಿಗೆ ಜೊತೆಗೂಡಿಸುವ ಕಾರ್ಯವನ್ನು ಸಂಸ್ಥಿಕಗೊಳಿಸಲಾಗಿದೆ. ಈ ಉದ್ದೇಶದಿಂದ "ರಾಷ್ಟ್ರೀಯ ಮಹಿಳಾಕೋಶವನ್ನು ಸ್ಥಾಪಿಸಲಾಗಿದೆ. ನಬಾರ್ಡ ಹಾಗೂ ರಾಷ್ಟ್ರೀಯ ಮಹಿಳಾಕೋಶಗಳೂ ಕೂಡ ಸ್ವ-ಸಹಾಯ ಸಮೂಹಗಳಿಗೆ ಸಾಲ ಹಾಗೂ ಸಹಾಯಧನ ನೀಡುವಲ್ಲಿ ನೆರವಾಗುತ್ತಿವೆ.

ಸರ್ಕಾರದ ಸಹಾಯ ಹಾಗೂ ಸೌಲಭ್ಯಗಳಿಸುವ ಕೊಂಡಿಯಾಗಿ ಸ್ವ-ಸಹಾಯ ಸಮೂಹಗಳು ಯಶಸ್ವಿಯಾಗಿ ಕಾರ್ಯಚರಿಸುವುದಾದಲ್ಲಿ ಅವುಗಳ ಮೂಲಕ ಸರ್ಕಾರದ ಅನ್ಯಾನ್ಯ ಯೋಜನೆಗಳು ಮತ್ತು ಸಹಾಯ ಸೌಲಭ್ಯಗಳ ಬಗ್ಗೆ ಸದಸ್ಯರಿಗೆ ಮಾಹಿತಿಯನ್ನು

ಒದಗಿಸುವುದೂ ಕೂಡ ಸುಲಭವಾಗುವುದು. ಮಾತ್ರವಲ್ಲ ಅಂತಹ ಸೌಲಭ್ಯಗಲನ್ನು ಪಡೆದು ಅಭಿವೃದ್ಧಿ ಕಾರ್ಯಗಳಲ್ಲಿ ತೊಡಗಿಕೊಳ್ಳುವಂತೆಯೂ ಅವರಿಗೆ ಪ್ರೇರಣೆ ನೀಡಲು ಸಾಧ್ಯವಾಗುವುದು. ಅಂತೆಯೇ ಸರ್ಕಾರದ "ಸ್ವ-ಉದ್ಯೋಗ ಯೋಜನೆ" "ಸ್ವರ್ಣ ಜಯಂತಿ ಗ್ರಾಮ ಸ್ವ-ರೋಜಗಾರ್ ಯೋಜನೆ" ವಯಸ್ಕ ಶಿಕ್ಷಣ ಯೋಜನೆ" ಮುಂತಾದವುಗಳ ಪ್ರಯೋಜನ ಪಡೆಯುವಂತೆ ಅವರಿಗೆ ತಿಳಿಸಲಾಗುತ್ತಿದೆ. ಮಾತ್ರವಲ್ಲ ಇಂತಹ ಯೋಜನೆಗಳನ್ನು "ಸ್ತ್ರೀಶಕ್ತಿ ಯೋಜನೆ" ಯೊಂದಿಗೆ ಸಮನ್ವಯಗೊಳಿಸುವುದರ ಮೂಲಕ "ಸ್ತ್ರೀಸಶಕ್ತಿಕರಣ ಪ್ರಕ್ರಿಯೆ"ಗೆ ಇನ್ನಷ್ಟು ಬಲ ಬರುವಂತೆ ಮಾಡುವ ಪ್ರಯತ್ನಗಳೂ ನಡೆಯುತ್ತಿವೆ.

ಅತ್ಯುತ್ತಮವಾಗಿ ಕಾರ್ಯನಿರ್ವಹಣೆ ಮಾಡುವ ಸ್ತ್ರೀಶಕ್ತಿ ಗುಂಪುಗಳಿಗೆ ಯಶೋಧರಮ್ಮ ದಾಸಪ್ಪ ಪ್ರಶಸ್ತಿ ನೀಡಲಾಗುವದು ಇದರಿಂದಾಗಿ ಸ್ತ್ರೀಶಕ್ತಿ ಗುಂಪುಗಳಿಗೆ ಪ್ರೋತ್ಸಾಹವನ್ನು ನೀಡಿದಂತಾಗುವುದು. ಗುಂಪಿನ ಸದಸ್ಯರು ಅತ್ಯುತ್ತಮವಾಗಿ ಕಾರ್ಯವನ್ನು ನಿರ್ವಹಿಸುವರು.

ಸ್ತ್ರೀಶಕ್ತಿ ಯೋಜನೆ ಸಾಧನೆಗಳು ಹಾಗೂ ನಿರೀಕ್ಷೆಗಳು

- ಸ್ವಾವಲಂಬನೆಯತ್ತ ಸ್ತ್ರೀಯರು ಸ್ತ್ರೀಶಕ್ತಿ ಸಮೂಹಗಳ ಮೂಲಕ ಸಿಕ್ಕಿದ ಪ್ರೇರಣೆಯಿಂದಾಗಿ ಗ್ರಾಮೀಣ ಭಾಗದ ಸ್ತ್ರೀಯರು ಕೋಳಿ ಸಾಕಾಣಿಕೆ, ಕುರಿ – ಹಂದಿ ಸಾಕಾಣಿಕೆ, ಕ್ಷೀರೋದ್ಯಮ, ಆಟಿಕೆಗಳ ತಯಾರಿಕೆ, ಸಂಬಾರ ಪದಾರ್ಥಗಳ ತಯಾರಿಕೆ, ಮೀನು ಸಂಸ್ಕರಣೆ, ಸಾವಯವ ಗೊಬ್ಬರ ತಯಾರಿಕೆ, ಚಾಪೆ – ಬುಟ್ಟಿ ಹೆಣೆಯುವಿಕೆ, ಹೊಲಿಗೆ ಕೆಲಸ ಕೈಗೊಳ್ಳುವಿಕೆ ಮುಂತಾದ ಆರ್ಥಿಕ ಚಟುವಟಿಕೆಗಳಲ್ಲಿ ಬಾಹ್ಯ ನೆರವಿಲ್ಲದೆ ಸ್ವಾವಲಂಬಿಗಳಾಗಿ ತೊಡಗಿಕೊಳ್ಳುವುದು ಸಾಧ್ಯವಾಗಿದೆ.
- ಗ್ರಾಮೀಣ ಋಣಭಾರತ್ವ ನಿವಾರಣೆಯಲ್ಲಿ ಮೈಲುಗಲ್ಲು ಇಂದಿಗೂ ಬಡತನದಲ್ಲಿಯೇ ಮುಳುಗಿರುವ ಗ್ರಾಮೀಣ ಭಾಗದ ಬಹಳಷ್ಟು ಮಂದಿ ಮತ್ತೆ ಪುನಃ ಸಾಲಗಾರರ ಸುಳಿಗೆ

ಸಿಲುಕದಂತೆ "ಋಣಭಾರತ್ವ"ದ ಉರುಳಿಗೆ ಕೊರಳು ನೀಡದಂತೆ ಮಾಡುವಲ್ಲಿ ಈ ಯೋಜನೆ ನೆರವಾಗಿದೆ.

- ಬಡತನದ ನಿವಾರಣೆಗೂ ಸಹಾಯಕ. ಈ ಯೋಜನೆಯಿಂದ ಗ್ರಾಮೀಣ ಸ್ತ್ರೀಯರನ್ನು ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿ ಹಾಗೂ ಸಶಕ್ತರನ್ನಾಗಿ ಮಾಡಲು ಸಾಧನವಾಗಬಹುದಾದ್ದರಿಂದ ಅವರು ಬಡತನದ ಬವಣೆಯಿಂದ ಆದಷ್ಟು ಬೇಗನೆ ಮುಕ್ತರಾಗುವುದು ಸಾಧ್ಯವೆಂದು ಆಶಿಸಲಾಗಿದೆ.

- ಸ್ವ-ಉದ್ಯೋಗಕ್ಕೆ ಉತ್ಪಾದನಾ ಚಟುವಟಿಕೆಗಳಿಗೆ ಪ್ರೇರಣೆ ಇದುವರೆಗೂ ತಮ್ಮ ಗಂಡಸರನ್ನೇ ಎಲ್ಲದಕ್ಕೂ ಆತುಕೊಳ್ಳಬೇಕಾಗಿದ್ದ ಗ್ರಾಮೀಣ ಸ್ತ್ರೀಯರಿಗೆ ಆರ್ಥಿಕ ಸ್ವಾವಲಂಬನೆ ಪಡೆಯಲು ಈ ಯೋಜನೆ ಸಹಕಾರಿಯಾಗಿದೆ. ತಮ್ಮ ಬಿಡುವಿನ ಸಮಯವನ್ನು ಆರ್ಥಿಕವಾಗಿ ಲಾಭದಾಯಕವಾಗಿ ಉದ್ಯೋಗಗಳಿಗೆ ವಿನಿಯೋಗಿಸಲು ಅವರಿಗೆ ಈಗ ಸಾಧ್ಯ.

- ಸ್ತ್ರೀಯರಲ್ಲಿ ಮೂಡಿಸಬಹುದಾದ ಅಪಾರವಾದ ಆತ್ಮವಿಶ್ವಾಸ ಹಾಗೂ ಸ್ವಾವಲಂಬನೆಯ ಭಾವ ಈ ಯೋಜನೆಯ ಅತ್ಯುತ್ತಮ ಯಶಸ್ಸನ್ನು ಗ್ರಾಮೀಣ ಸ್ತ್ರೀಯರಲ್ಲಿ ಅದು ಮೂಡಿಸಬಹುದಾದ ಅಪಾರವಾದ ಆತ್ಮ ವಿಶ್ವಾಸ ಹಾಗೂ ಸ್ವಾವಲಂಬನೆಯ ಭಾವದಲ್ಲಿ ಕಾಣಬಹುದಾಗಿದೆ. ಕುಟುಂಬದಲ್ಲಾಗುವ ಸಣ್ಣ ಪುಟ್ಟ ಆರ್ಥಿಕ ಏರು-ಪೇರುಗಳನ್ನು ನಿಭಾಯಿಸಿಕೊಂಡು ಹೋಗುವ ಧೈರ್ಯವನ್ನು ಈ ಯೋಜನೆ ಅವರಲ್ಲಿ ಮೂಡಿಸಿದೆ ಮಾತ್ರವಲ್ಲ, ಸ್ತ್ರೀಯರ ಸಂಘಟನಾ ಶಕ್ತಿಯನ್ನು ಇದು ಹೆಚ್ಚಿಸಿದೆ.

- ಹಣ ಉಳಿತಾಯಕ್ಕೆ ಪ್ರೇರಣೆ ಈ ಯೋಜನೆಯಲ್ಲಿ ಭಾಗಿಗಳಾಗುವ ಸ್ತ್ರೀಯರು ನಿಗದಿತ ಮೊತ್ತವೊಂದನ್ನು ಉಳಿತಾಯ ಮಾಡಿ ಬ್ಯಾಂಕ್ ಖಾತೆಗೆ ಜಮಾ ಮಾಡಬೇಕಾದ್ದರಿಂದ ಉಳಿತಾಯದ ಅಭ್ಯಾಸವನ್ನು ರೂಢಿಸಿಕೊಳ್ಳುವುದು ಅನಿವಾರ್ಯವಾಗುವುದು. ಇದು

ಅನಗತ್ಯ ಖರ್ಚುಗಳಿಗೆ ತಡೆ ಹಾಕುವುದಲ್ಲದೇ ಆಪತ್ಕಾಲದಲ್ಲಿ ಒಂದು ನಿಧಿಯಾಗಿ ಸಹಾಯಕ್ಕೆ ಬರುವುದು. ರಾಜ್ಯಾದ್ಯಂತ ಈ ರೀತಿ ಉಳಿತಯ ಮಾಡಿದ ಹಣ ವರ್ಷಂಪ್ರತಿ ಕೆಲವು ಕೋಟಿಗಳಷ್ಟಾಗುವುದು.

- ಸ್ತ್ರೀಯರಲ್ಲಿ ಹೊಸ ಜಾಗೃತಿ ಮೂಡಿಸಿದ ಯೋಜನೆ ಕಾರಣದಿಂದಾಗಿ ಎಷ್ಟೇ ಮಂದಿ ಸ್ತ್ರೀಯರು ತಮ್ಮ ಕುಟುಂಬದ ಹೊರಬಂದು ವ್ಯವಹಾರಿಕ ಜಗತ್ತಿನ ಅನುಭವ ಪಡೆಯುವುದು ಸಾಧ್ಯವಾಗಿದೆ.

ತರಬೇತಿ ವ್ಯವಸ್ಥೆಯ ತುಣುಕು ಮಾಹಿತಿ

ದಿನಾಂಕ ೩-೯-೨೦೦೧ ರಿಂದ ೦೮-೧೧-೨೦೦೧ ರವರೆಗಿನ ಕೋರ್ ತಂಡದ ತರಬೇತಿಯನ್ನು ರಾಜ್ಯಮಟ್ಟದಲ್ಲಿ ಹಮ್ಮಿಕೊಳ್ಳಲಾಯಿತು.

ಕೋರ್ ತಂಡಕ್ಕೆ ತರಬೇತಿಯನ್ನು ನೀಡಲಾಗಿತ್ತು

↓ ನಂತರ

ಜಿಲ್ಲೆಯ ಅಧಿಕಾರಿಗಳಿಗೆ

↓ ನಂತರ

ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ

↓ ತದನಂತರ

ಅಂಗನವಾಡಿ ಕಾರ್ಯಕರ್ತೆಯರಿಗೆ

↓ ಕೊನೆಯದಾಗಿ

ಗುಂಪಿನ ಸದಸ್ಯರಿಗೆ ತರಬೇತಿ

ಮೇಲೆ ತಿಳಿಸದಂತೆ "ಸ್ತ್ರೀ ಶಕ್ತಿ" ಯೋಜನೆಯ ತರಬೇತಿಯ ತುಣುಕು ಮಾಹಿತಿಯನ್ನು ನೀಡಲಾಗಿದೆ. ಈ ತರಬೇತಿ ವ್ಯವಸ್ಥೆಯಲ್ಲಿ ಅಂಗನವಾಡಿ ಕಾರ್ಯಕರ್ತೆಯರ ಹಾಗೂ ಗುಂಪಿನ ಸದಸ್ಯರ ಕಾರ್ಯ ಬಹಳ ಪ್ರಮುಖವಾದುದ್ದಾಗಿದೆ.

ಈಗ ನಾವು ಮಹಿಳಾ ಕಲ್ಯಾಣಕ್ಕಾಗಿ ಕರ್ನಾಟಕ ಸರ್ಕಾರ ಹಮ್ಮಿಕೊಂಡಿರುವ ಸ್ತ್ರೀ ಶಕ್ತಿ ಹಾಗೂ ಸ್ವ ಸಹಾಯ ಗುಂಪುಗಳ ಯೋಜನೆಗಳು ಅತಿ ಮಹತ್ವವನ್ನು ಪಡೆದುಕೊಂಡಿದೆ.

ಗ್ರಾಮೀಣ ಪ್ರದೇಶದ ಮಹಿಳೆಯರ ಸಾಮಾಜಿಕ, ಆರ್ಥಿಕ ಮತ್ತು ಸರ್ವತೋಮುಖ ಅಭಿವೃದ್ಧಿಯನ್ನು ಹೆಚ್ಚಿಸುವ ಸಲುವಾಗಿ ಕರ್ನಾಟಕ ರಾಜ್ಯವು ಹಲವಾರು ಯೋಜನೆಗಳನ್ನು ರೂಪಿಸಿ ಜಾರಿಗೊಳಿಸುತ್ತಿದ್ದರೂ ಸಹ ಮಹಿಳೆಯರ ಆತ್ಮವಿಶ್ವಾಸ ಹಾಗೂ ಸ್ವಸಾಮರ್ಥ್ಯ ಹೆಚ್ಚಿಸುವಲ್ಲಿ ಪರಿಣಾಮಕಾರಿಯಾಗಿರುವುದಿಲ್ಲ. ಮಹಿಳೆಯರಲ್ಲಿ ಆತ್ಮವಿಶ್ವಾಸ ಮತ್ತು ಸ್ವಾವಲಂಬನೆಯನ್ನು ಮೂಡಿಸುವ ಹಿನ್ನಲೆಯಲ್ಲಿ ರಾಜ್ಯದಲ್ಲಿ ಒಂದು ಹೊಸ ಯೋಜನೆಯನ್ನು ಹಾಕಿಕೊಳ್ಳಲಾಯಿತು ಅದುವೇ ಸ್ತ್ರೀ ಶಕ್ತಿ ಯೋಜನೆಯಾಗಿದೆ.

ಈ ಯೋಜನೆಯನ್ನು ಮಾನ್ಯ ಶ್ರೀ ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಯಾದ ಸಂದರ್ಭದಲ್ಲಿ ಸ್ತ್ರೀ ಶಕ್ತಿ ಯೋಜನೆಯನ್ನು ಘೋಷಿಸಿದರು. ಅಂತೆಯೇ ' ಸ್ತ್ರೀ ಶಕ್ತಿ' ಯೋಜನೆಯನ್ನು ಅಗಷ್ಟ ೨೫ ರಂದು ೨೦೦೦ ನೇ ಇಸವಿಯಲ್ಲಿ ಈ ಯೋಜನೆಯನ್ನು ಸರ್ಕಾರವು ಮಂಜೂರು ಮಾಡಿತು.

ಆರಂಭದಲ್ಲಿ ಕರ್ನಾಟಕ ರಾಜ್ಯದಲ್ಲಿಯ ೧೭೫ ತಾಲ್ಲೂಕುಗಳಲ್ಲಿ ೨೦೦೧ ಮತ್ತು ೨೦೦೨ ರ ಅವಧಿಯಲ್ಲಿ ೭೧೨೮೪ ಸ್ವ ಸಹಾಯ ಗುಂಪುಗಳನ್ನು ರಚಿಸಲಾಯಿತು. ಸುಮಾರು ೧೦.೮೪ ಲಕ್ಷ ಮಹಿಳೆಯರನ್ನು ಸಂಘಟಿಸಲಾಯಿತು, ಸಂಘಟನೆಗೊಂಡ ಮಹಿಳೆಯರು ಸುಮಾರು ೨೬ ಕೋಟಿ ರೂಗಳನ್ನು ಉಳಿತಾಯ ಮಾಡಿ ಪ್ರಗತಿ ಸಾಧಿಸಿದ್ದಾರೆ.

೨೦೦೨ ಮತ್ತು ೨೦೦೩ ರ ಅವಧಿಯಲ್ಲಿ

ಕರ್ನಾಟಕದ ಎಲ್ಲ ತಾಲೂಕುಗಳಲ್ಲಿ ೭೫೦೨೬ ಸ್ವಸಹಾಯ ಗುಂಪುಗಳನ್ನು ರಚಿಸಲಾಗಿದ್ದು ಸುಮಾರು ೧೦.೯೫ ಲಕ್ಷ ಮಹಿಳೆಯರನ್ನು ಸಂಘಟಿಸಲಾಗಿದೆ. ಈ ಅವಧಿಯಲ್ಲಿ ಸಂಘಟನೆಯಾದಂತಹ ಮಹಿಳೆಯರು ಸುಮಾರು ೯೦.೨೯ ಕೋಟಿ ರೂಗಳನ್ನು ಉಳಿತಾಯ ಮಾಡಿದ್ದಾರೆ.

೨೦೦೩ ಮತ್ತು ೨೦೦೪ ರ ಅವಧಿಯಲ್ಲಿ

ಕರ್ನಾಟಕ ರಾಜ್ಯದ ಎಲ್ಲ ತಾಲೂಕುಗಳಲ್ಲಿ ೧ ಲಕ್ಷ ಸ್ವ ಸಹಾಯ ಗುಂಪುಗಳನ್ನು ರಚಿಸಿದ್ದು, ಸುಮಾರು ೧೪.೭೫ ಲಕ್ಷ ಮಹಿಳೆಯರನ್ನು ಸಂಘಟಿಸಲಾಗಿದೆ. ಸಂಘಟನೆಯಾದ ಮಹಿಳೆಯರು ಸುಮಾರು ೧೫೧.೭೮ ಕೋಟಿ ರೂಗಳ ಉಳಿತಾಯವನ್ನು ಮಾಡಿ ಉತ್ತಮ ಪ್ರಗತಿಯನ್ನು ಸಾಧಿಸಿದ್ದಾರೆ.

ಪ್ರಸ್ತುತವಾಗಿ ೨೦೧೦ ಮತ್ತು ೨೦೧೧ ರ ಅವಧಿಯಲ್ಲಿ

ಪ್ರಸ್ತುತವಾಗಿ ರಾಜ್ಯದಲ್ಲಿ ೧ ಲಕ್ಷ ೩೦ ಸಾವಿರ ಸ್ತ್ರೀ ಶಕ್ತಿ ಸಂಘಗಳು ಗ್ರಾಮೀಣ ಪ್ರದೇಶದಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಸುಮಾರು ೧೯ ಲಕ್ಷ ಮಹಿಳೆಯರು ಈ ಗುಂಪಿನ ಸದಸ್ಯರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಸಂಘಟನೆಗೊಂಡ ಮಹಿಳೆಯರು ಸುಮಾರು ೯೭೧.೮೪ ಕೋಟಿ ರೂಗಳನ್ನು ಉಳಿತಾಯ ಮಾಡಿರುತ್ತಾರೆ.

ಈ ರೀತಿ ಪ್ರಗತಿ ಪಥದಲ್ಲಿ ' ಸ್ತ್ರೀ ಶಕ್ತಿ' ಯೋಜನೆ ಸಾಗುತ್ತಿದೆ.

ಅಧ್ಯಾಯ – ಎರಡು :

ಐತಿಹಾಸಿಕ ಹಿನ್ನೆಲೆ

ಅಧ್ಯಾಯ – ಎರಡು :

ಐತಿಹಾಸಿಕ ಹಿನ್ನೆಲೆ

ಸ್ತ್ರೀಯರು ಹೊಂದಿರುವ ಸ್ಥಾನಮಾನವೆಂಬುದು ಯಾವುದೇ ಸಮಾಜದ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಮತ್ತು ನಾಗರಿಕತೆಯ ಮುನ್ನಡೆಯನ್ನು ಅಳೆಯುವ ಮಾನದಂಡವಿದ್ದಂತೆ ಎನ್ನುವ ಮಾತಿದೆ. ಸ್ತ್ರೀಯರನ್ನು ಗೌರವಿಸಿದ ಮತ್ತು ಅವರಿಗೆ ಅರ್ಹವಾದ ಅಂತಸ್ತು ಹಾಗೂ ಅವಕಾಶಗಳನ್ನು ಕಲ್ಪಿಸಿಕೊಡದೇ ಇರುವ ಸಮಾಜವು ಎಂದಿಗೂ ಪ್ರಗತಿ ಸಾಧಿಸಲಾರದು ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಸ್ತ್ರೀಯರ ಸ್ಥಾನಮಾನದಲ್ಲಿ ಅವನತಿಯಾಗುತ್ತಾ ಹೋಗುತ್ತಿದ್ದಂತೆ ವೇದೋತ್ತರ ಕಾಲದಿಂದ ಬಹುಷ ಆಳ್ವಿಕೆಯ ಅಂತ್ಯದವರೆಗೂ ಭಾರತೀಯ ಸಮಾಜವು ಒಂದಲ್ಲ ಒಂದು ತೆರನಾದ ದಾಸ್ಯಕ್ಕೆ ಸಿಲುಕಿ ಅವನತಿಯನ್ನು ಕಾಣುತ್ತಲೇ ಹೋಯಿತು. ಸ್ವಾತಂತ್ರ್ಯ ನಂತರದಲ್ಲಿ ಮಾತ್ರ ಭಾರತೀಯ ಸಮಾಜದ ಪರಿಸ್ಥಿತಿ ಸುಧಾರಿಸುತ್ತಾ ಹೋದಂತೆ ಸ್ತ್ರೀಯರ ಸ್ಥಾನಮಾನದಲ್ಲಿಯೂ ಸಾಕಷ್ಟು ಸುಧಾರಣೆಗಳನ್ನು ಕಾಣುವುದು ಸಾಧ್ಯವಾಯಿತು.

ಭಾರತೀಯ ಸ್ತ್ರೀಯರ ಸ್ಥಾನಮಾನಕ್ಕೆ ಸಂಬಂಧಿಸಿದಂತೆ ಕೆಲವು ವಿಪರ್ಯಾಸಗಳು ಹಾಗೂ ವಿಲಕ್ಷಣತೆಗಳು ನಮ್ಮ ಗಮನ ಸೆಳೆಯುವುವು. ಸ್ತ್ರೀಯರನ್ನು ಪೂಜ್ಯತೆಯಿಂದ, ಗೌರವಭಾವದಿಂದ ಕಾಣುತ್ತಾ ಅವರನ್ನು "ದೈವೀ ಸ್ವರೂಪ" ವೆಂದು ಕೊಂಡಾಡುತ್ತಾ ಬಂದ ಸಮಾಜದಲ್ಲಿ ಸ್ತ್ರೀಯರು ಸ್ವಾತಂತ್ರ್ಯಕ್ಕೆ ಸಮಾನತೆಗೆ ಅನರ್ಹರಾಗಿ ಹಲವಾರು ಬಗೆಯ ದೌರ್ಬಲ್ಯಗಳಿಗೆ, ಪೀಡನೆಗಳಿಗೆ ಒಳಗಾದುದಾದರೂ ಹೇಗೆ? ಎಂಬ ಪ್ರಶ್ನೆ ನಮ್ಮನ್ನು ಕಾಡದಿರದು.

ವಿಲಕ್ಷಣತೆ ಹಾಗೂ ವೈರುಧ್ಯತೆಗಳ ಮಧ್ಯದಲ್ಲಿ ಭಾರತೀಯ ಮಹಿಳೆಯರು ವೇದಗಳ ಕಾಲದಿಂದ ಹಿಡಿದು ಇಂದಿನ ಈಗಿನ ಸ್ಥಿತಿಯನ್ನು ಹೇಗೆ ತಲುಪಿದರು ಎಂಬುದನ್ನು ವಿಶ್ಲೇಷಿಸುವುದು ಸುಲಭದ ಮಾತೇನಲ್ಲ. ಪ್ರಾಚೀನ ಕಾಲದಿಂದ ಹಿಡಿದು ಮಧ್ಯಕಾಲಿನ ಯುಗವನ್ನೊಳಗೊಂಡಂತೆ ಸ್ವಾತಂತ್ರ್ಯೋತ್ತರದ ಆಧುನಿಕ ಭಾರತದಲ್ಲಿನ ಸ್ತ್ರೀಯರ ಸ್ಥಾನಮಾನಗಳಲ್ಲಾದ ಏರು–ಪೇರುಗಳನ್ನು ಸೂಕ್ಷ್ಮವಾಗಿ ಪರಿಶೀಲಿಸುವ ಪ್ರಯತ್ನ ಇಲ್ಲಿದೆ. ಜೊತೆಗೆ ಪ್ರಸಕ್ತ ಭಾರತದಲ್ಲಿನ ಸ್ತ್ರೀ ಸಮುದಾಯವು ಎದುರಿಸಬೇಕಾಗಿರುವ ಸಮಸ್ಯೆ–ಸವಾಲುಗಳ ಬಗ್ಗೆ ಹಾಗೂ "ದುರ್ಬಲರು" ಎಂದೆನಿಸಿಕೊಂಡ ಸ್ತ್ರೀಯರನ್ನು ಸಶಕ್ತರನ್ನಾಗಿಸುವ ಅವಶ್ಯಕತೆಯ ಬಗ್ಗೆಯೂ ಇಲ್ಲಿ ವಿಶ್ಲೇಷಿಸಲಾಗಿದೆ. ಜೊತೆಗೆ ತಮ್ಮ ಹೇರಲಾದ ಹಲವಾರು ಬಗೆಯ ಇತಿಮಿತಿಗಳ ಹೊರತಾಗಿಯೂ ಉತ್ತಮ ಸಾಧನೆ ಮಾಡಿದ ಸ್ತ್ರೀ ಸಾಮರ್ಥ್ಯದ ಬಗೆಗಿನ ಪ್ರಸ್ತಾಪವೂ ಈ ಅಧ್ಯಾಯದಲ್ಲಿದೆ.

ಪ್ರಾಚೀನ ಭಾರತದಲ್ಲಿ ಸ್ತ್ರೀಯರ ಸ್ಥಾನಮಾನ [ಕ್ರಿಪೂ.೨೦೦೦ ಕ್ರಿಶ. ೫೦೦]

- **ವೇದಗಳ ಕಾಲದಲ್ಲಿ ಸ್ತ್ರೀಯರ ಅಂತಸ್ತು :–**

ಭಾರತೀಯ ಸಾಂಸ್ಕೃತಿಕ ಪರಂಪರೆ ಆರಂಭವಾಗುವುದೇ ವೇದಗಳಿಂದ. ವೇದಗಳ ಕಾಲದಲ್ಲಿ ಭಾರತೀಯ ಸ್ತ್ರೀಯರ ಸಾಮಾಜಿಕ ಅಂತಸ್ತು ಬಹಳ ಉತ್ತಮ ಮಟ್ಟದ್ದಾಗಿತ್ತು. ಲಿಖಿತ ದಾಖಲೆಗಳಿಂದ ತಿಳಿದು ಬರುವಂತೆ ಎಷ್ಟೋ ವಿಷಯಗಳಲ್ಲಿ ಅವರ ಅಂತಸ್ತು ಪುರುಷರಿಗೆ ಸರಿಸಮಾನವಾಗಿತ್ತು.

೧) ವೇದಗಳ ಕಾಲದಲ್ಲಿ ಸ್ತ್ರೀಯರ ಅಂತಸ್ತು

ಭಾರತೀಯರ ಸಾಂಸ್ಕೃತಿ ಪರಂಪರೆ ಆರಂಭವಾಗುವುದೇ ವೇದಗಳಿಂದ. ವೇದಗಳ ಕಾಲದಲ್ಲಿ ಸ್ತ್ರೀಯರ ಅಂತಸ್ತು ಉತ್ತಮ ಮಟ್ಟದ್ದಾಗಿತ್ತು.

- **ಸ್ತ್ರೀಯರು ಹೊಂದಿದ್ದ ಸ್ವಾತಂತ್ರ್ಯ :-**

ವೇದಗಳ ಕಾಲದಲ್ಲಿ ಸ್ತ್ರೀಯರು ಪುರುಷರಷ್ಟೇ ಸ್ವತಂತ್ರರಾಗಿದ್ದರು. ಶಿಕ್ಷಣ, ವಿವಾಹ, ವಿವಾಹ ವಿಚ್ಛೇದನೆ, ಆರ್ಥಿಕ ಉತ್ಪಾದನೆ, ಸಂಪತ್ತಿನ ಅನುಭೋಗ ಧಾರ್ಮಿಕ ಕ್ರಿಯಾವಿಧಿಗಳ ಆಚರಣೆ ಮುಂತಾದ ವಿಷಯಗಳಲ್ಲಿ ಸ್ತ್ರೀಯರಿಗೆ ಬಹಳಷ್ಟು ಸ್ವಾತಂತ್ರ್ಯ ನೀಡಲಾಗಿತ್ತು. ಅವರು "ಜರ್ದಾ" [ಅವಕುಂಠನ] ಧರಿಸಿ ಪುರುಷರ ದೃಷ್ಟಿಗೆ ಬಾರದೆ ಮರೆಯಲ್ಲಿರಬೇಕಾದ ಅಗತ್ಯವಿರಲಿಲ್ಲ. ಕೌಟುಂಬಿಕ ವಿಚಾರಗಳಲ್ಲಿ ಅವರಿಗೆ ಪೂರ್ಣ ಸ್ವಾತಂತ್ರ್ಯ ನೀಡಲಾಗಿತ್ತಲ್ಲದೆ ಪತ್ನಿಯರನ್ನು "ಅರ್ಧಾಂಗಿನಿ"ಯರೆಂದು ಕರೆಯಲಾಗುತ್ತಿತ್ತು.

"ಪತ್ನಿಯಿಲ್ಲದ ಪುರುಷ" "ಅಪರಿಪೂರ್ಣನಾದ ವ್ಯಕ್ತಿ" ಎಂದು ಶತಪಥ ಬ್ರಾಹ್ಮಣ ಸ್ಪಷ್ಟವಾಗಿ ಸಾರಿದೆ. ಅದೊಂದು ಬಗೆಯ ಅನರ್ಹತೆ. ಗೃಹಸ್ಥಾಶ್ರಮವು ಈ "ಅನರ್ಹತೆ"ಯನ್ನು ನಿವಾರಿಸುವುದು.

- **ಸ್ತ್ರೀಯರಿಗೂ ಶಿಕ್ಷಣದಲ್ಲಿ ಸಮಾನ ಅವಕಾಶ :-**

ವೇದಗಳ ಕಾಲದಲ್ಲಿ ಬಾಲಕಿಯರಿಗೂ "ಉಪನಯನ" ಸಂಸ್ಕಾರ ನೀಡಿ ವೇದಾಧ್ಯಾಯನಕ್ಕೆ ಸನ್ನದ್ಧಗೊಳಿಸಲಾಗುತ್ತಿತ್ತು. ಅಥರ್ವವೇದವು " ಸ್ತ್ರೀಯೊಬ್ಬಳ ವೈವಾಹಿಕ ಜೀವನದ ಯಶಸ್ಸು ಆಕೆಗೆ ಆಕೆಯ ಬ್ರಹ್ಮಚರ್ಯದಲ್ಲಿ ನೀಡಲಾದ ಸುಯೋಗ್ಯವಾದ ಶಿಕ್ಷಣವನ್ನು ಹೊಂದಿಕೊಂಡಿರುತ್ತದೆ" ಎಂದು ತಿಳಿಸುವುದು.

ಋಗ್ವೇದದ ಮಂತ್ರಗಳನ್ನು ರಚಿಸುವಲ್ಲಿ ಕನಿಷ್ಟ ೨೦ ಮಂದಿ ಸ್ತ್ರೀಯರು ಭಾಗಿಗಳಾಗಿದ್ದರು ಎಂದು ನಂಬಲಾಗಿದೆ. ಉಧಾಹರಣೆ :- ಲೋಪಾಮುದ್ರಾ, ಅಪಲಾ, ವಿಶ್ವಾವರಾ, ಘೋಷಾ, ಸಿಕತಾ, ನಿವಾವರಿ, ಇಂದ್ರಾಣಿ, ಗೃಹ್ಯಸೂತ್ರವು ಶ್ರೇಷ್ಠ ಬ್ರಹ್ಮವಾದಿನಿಯರಾಗಿದ್ದ (ತತ್ವಜ್ಞಾನಿಗಳು) ಸುಲಭ, ಮೈತ್ರೇಯಿ, ಗಾರ್ಗಿ, ಅಪಲಾ ಮುಂತಾದವರ ಹೆಸರುಗಲನ್ನು ನಿತ್ಯವೂ ನೆನಪಿಸಿಕೊಳ್ಳಬೇಕೆಂದು ವೇದ ಸಾಹಿತ್ಯವು ತಿಳಿಸುವುದು.

ವೇದಕಾಲದಲ್ಲಿ ಏಕಪತ್ನಿತ್ವವು ಸಾಧಾರಣ ನಿಯಮವಾಗಿತ್ತು. ಆದರೆ ಬಹುಪತ್ನಿತ್ವಕ್ಕೆ ಅವಕಾಶವಿದ್ದು ಅದು ಶ್ರೀಮಂತರು ಮತ್ತು ಕ್ಷತ್ರಿಯರಲ್ಲಿ ಬಳಕೆಯಲ್ಲಿತ್ತು. ಆಗ ಬಹುಪತಿತ್ವದ ಪ್ರಸ್ತಾಪವೇ ಇರಲಿಲ್ಲ. ವಿವಾಹವು ಧಾರ್ಮಿಕ ವಿಧಿಯಾಗಿತ್ತು. ವಿವಾಹ ವಿಚ್ಛೇದದ ಕುರಿತಾಗಿ ಮಾಹಿತಿಗಳಿಲ್ಲ. ವೇದಗಳ ಕಾಲದಲ್ಲಿ "ಸತಿ ಪದ್ಧತಿ" ಇರಲಿಲ್ಲ.

ಕುಟುಂಬದಲ್ಲಿಯ ಸ್ಥಾನ ವೇದಕಾಲದ ಸ್ತ್ರೀಯರಿಗೆ ವಿವಾಹದ ವಿಷಯದಲ್ಲಿ ಇದ್ದಷ್ಟು ಮುಕ್ತ ಸ್ವಾತಂತ್ರ್ಯ ಕೌಟುಂಬಿಕ ವಿಚಾರಗಳಲ್ಲಿ ಇರಲಿಲ್ಲಾವೆನ್ನಿಸುತ್ತದೆ. ವೇದಕಾಲದ ಕುಟುಂಬವು ಪಿತೃಯಾಜಮಾನ್ಯದ ರೀತಿಯದು.

- **ಆರ್ಥಿಕ ಉತ್ಪಾದನೆ ಮತ್ತು ವೃತ್ತಿ ಸ್ವಾತಂತ್ರ್ಯ :–**

ವೇದ ಕಾಲದ ಸ್ತ್ರೀಯರು ಬಟ್ಟೆ ನೂಲುವುದು. ನೇಯುವುದು, ಧರಿಸುವ ಉಟುಪು ಸಿದ್ಧಗೊಳಿಸುವುದು, ಕೃಷಿ ಕಾರ್ಯಗಳನ್ನು ನಡೆಸುವುದು, ಪಶು ಸಂಗೊಪನೆ ಮುಂತಾದ ಕಾರ್ಯಗಳಲ್ಲಿ ಪುರುಷರಿಗೆ ಸಹಕಾರಿಗಳಾಗಿ ನಿಲ್ಲುವುದು ಸ್ತ್ರೀಯರಿಗೆ ಸಹಜವಾಗಿತ್ತು.

- **ಆಸ್ತಿಯ ಹಕ್ಕು ಮತ್ತು ಉತ್ತರಾಧಿಕಾರ :–**

ಆಸ್ತಿಯ ವಿಷಯದಲ್ಲಿ ಸ್ತ್ರೀ–ಪುರುಷರ ನಡುವೆ ತಾರತಮ್ಯವಿತ್ತು. ಸ್ತ್ರೀಯರ ಆಸ್ತಿಯ ಹಕ್ಕುಗಳು ಬಹಳ ಸೀಮಿತವಾಗಿದ್ದವು. ಕುಟುಂಬದ ಸೊತ್ತಿನ ಮೇಲೆ ತಂದೆಯದೇ ಅಧಿಕಾರವಿದ್ದು ಆತ ಅದನ್ನು ತನಗಿಷ್ಟ ಬಂದಂತೆ ವಿಭಜಿಸುತ್ತಿದ್ದನು. ತಂದೆಯ ಆಸ್ತಿಯ ಮೇಲೆ ಮಕ್ಕಳಿಗೆ ಹಕ್ಕಿರಲಿಲ್ಲ. ಗಂಡು ಮಕ್ಕಳಿಗೆ ನೀಡಿದ ಪಿತ್ರಾರ್ಜಿತ ಆಸ್ತಿಯ ೧/೪ ಭಾಗ ಮಾತ್ರ ಅವಿವಾಹಿತ ಮಗಳಿಗೆ ಲಭ್ಯವಿತ್ತು. ತಂದೆಯ ನಂತರ ಆಸ್ತಿಯು ಸಾಮಾನ್ಯವಾಗಿ ಗಂಡು ಮಕ್ಕಳಿಗೆ ಸಲ್ಲುತ್ತಿತ್ತು. ತಂದೆಗೆ ಗಂಡು ಮಕ್ಕಳಿಲ್ಲದ ಸಂದರ್ಭದಲ್ಲಿ ಮಗಳಿಗೆ ಪಿತ್ರಾರ್ಜಿತ ಸೊತ್ತಿನ ಉತ್ತರಾಧಿಕಾರಕ್ಕೆ ಅವಕಾಶ ನೀಡಲಾಗುತ್ತಿತ್ತು.

ಸ್ತ್ರೀಯರಿಗೆ ತಮ್ಮ ವಿವಾಹದ ಸಮಯದಲ್ಲಿ ಕೊಡಲ್ಪಟ್ಟ ಉಡುಗೊರೆ, ಆಭರಣ, ಭೂಮಿ ಮುಂತಾದ "ಸ್ತ್ರೀಧನ" ವೆಂದು ಕರೆಯಲ್ಪಟ್ಟ ಆಸ್ತಿಯ ಮೇಲೆ ಮಾತ್ರ ಅಧಿಕಾರವಿತ್ತು. ಆಕೆಯ ಸತ್ತನಂತರ ಆಕೆಯ "ಸ್ತ್ರೀಧನ" ವೆಂದೇ ಕರೆಯಲ್ಪಡುತ್ತಿದ್ದ ಆಸ್ತಿಯು ಅವಿವಾಹಿತ ಹೆಣ್ಣು ಮಕ್ಕಳಿಗೆ ಮಾತ್ರ ಸಲ್ಲುತ್ತಿತ್ತು. ಗಂಡನ ಆಸ್ತಿಯಲ್ಲಿ ಹೆಂಡತಿಗೆ ಅಧಿಕಾರವಿರಲಿಲ್ಲ. ಪರಿತ್ಯಜನೆಗೆ ಒಳಗಾದ ಹೆಂಡತಿಗೆ ಗಂಡನ ಆಸ್ತಿಯ ಮೂರನೇ ಒಂದಾಂಶವನ್ನು ಕೊಡಬೇಕಾಗಿತ್ತು.

- **ಧಾರ್ಮಿಕ ಕ್ಷೇತ್ರದಲ್ಲಿ ಪಾತ್ರ :-**

ಸ್ತ್ರೀಯರಿಗೆ ಕೌಟುಂಬಿಕ ಹೊಣೆಗಾರಿಕೆಗಳು ಮಾತ್ರವಲ್ಲದೆ ಗಂಡನ ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸುವ ಪೂರ್ಣ ಅಧಿಕಾರವಿತ್ತು. ಮಾತ್ರವಲ್ಲ ಪತ್ನಿಯ ಸಹಭಾಗಿತ್ವವಿಲ್ಲದೆ ಪತಿಯಾದವನು ಯಾವುದೇ ಧಾರ್ಮಿಕ ಸಮಾರಂಭಗಳನ್ನು ಮತ್ತು ಕ್ರಿಯಾವಿಧಿಗಳನ್ನು ಕೈಗೊಳ್ಳಕೂಡದೆಂಬ ನಿಯಮವಿತ್ತು. ಅಂತೆಯೇ ಯಜ್ಞಗಳನ್ನು ಪತಿ – ಪತ್ನಿಯರಿಬ್ಬರೂ ಜೊತೆಯಲ್ಲಿಯೇ ಮಾಡುತ್ತಿದ್ದರು. ಪತಿಯಾದವನು ಯಜ್ಞಾದಿ ಕಾರ್ಯಗಳನ್ನು ನಡೆಸುವಾಗ ಮಂತ್ರಗಳನ್ನು ಸುಶ್ರಾವ್ಯವಾಗಿ ಹಾಡುವಂತಹ ಕಾರ್ಯವು ಪತ್ನಿಯದೇ ಆಗಿತ್ತು.

- **ಸಾರ್ವಜನಿಕ ಜೀವನದಲ್ಲಿ ಸ್ತ್ರೀಯರ ಪಾತ್ರ :-**

ಪ್ರಾಚೀನ ಭಾರತದಲ್ಲಿ ರಾಜ ಪ್ರಭುತ್ವದ ಮಾದರಿಯ ರಾಜಕೀಯ ವ್ಯವಸ್ಥೆಯೇ ಬಹಳ ಕಾಲದವರೆಗೆ ಅಸ್ತಿತ್ವದಲ್ಲದ್ದುದರಿಂದ ಅದರಲ್ಲಿ ಸ್ತ್ರೀಯರಿಗೆ ಯಾವುದೇ ಮುಖ್ಯ ಪಾತ್ರವಿರಲಿಲ್ಲ. "ಸಭಾ' ಮತ್ತು "ಸಮಿತಿ"ಗಳೆಂಬ ಆಗಿನ ರಾಜಕೀಯ ಸ್ವರೂಪದ ಪ್ರತಿನಿಧಿ ಸಭೆಗಳಲ್ಲಿ ಕುಡಿತ ಹಾಗೂ ದ್ಯೂತ ಕೂಡಾ ನಡೆಯುತ್ತಿದ್ದುದರಿಂದ ಸ್ತ್ರೀಯರಿಗೆ ಅವುಗಳಲ್ಲಿ ಪ್ರವೇಶವಿರಲಿಲ್ಲ.

ರಾಜಕೀಯ ಸಹಭಾಗಿತ್ವಕ್ಕೆ ಸಂಬಂಧಿಸಿದ ಇತಿಮಿತಿಗಳನ್ನು ಬಿಟ್ಟರೆ ಸಾರ್ವಜನಿಕ ಜೀವನ ನಡೆಸಲು ಸ್ತ್ರೀಯರಿಗೆ ಸಾಕಷ್ಟು ಅವಕಾಶಗಳನ್ನು ನೀಡಲಾಗಿತ್ತು.

- **ಮಹಾಕಾವ್ಯಗಳ ಕಾಲ :-**

ಮಹಾಕಾವ್ಯಗಳಾದ ಮಹಾಭಾರತ ಮತ್ತು ರಾಮಾಯಣಗಳು ಸ್ತ್ರೀಯರಿಗೆ ಉಚ್ಛತಮವಾದ ಸ್ಥಾನವನ್ನು ನೀಡಿದೆ. ಒಂದು ದೃಷ್ಟಿಯಲ್ಲಿ ನೋಡುವುದಾದರೆ ಈ ಎರಡೂ ಕಾವ್ಯಗಳ ಕೇಂದ್ರ ಬಿಂದುಗಳು ಸ್ತ್ರೀಯರೇ ಆಗಿದ್ದಾರೆ. "ರಾಮಾಯಣ" ದಲ್ಲಿ ಸೀತೆಯ ಕಾರಣಕ್ಕಾಗಿ "ಮಹಾಭಾರತ" ದಲ್ಲಿ ದ್ರೌಪದಿಯ ಕಾರಣಕ್ಕಾಗಿ ಘೋರವಾದ ಯುದ್ಧಗಳಾಗಿವೆ. ಇವೆರಡರ ಕಾಲದಲ್ಲೂ ಸ್ತ್ರೀಯರಿಗೆ ಜೀವನ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವ ಮತ್ತು ಸ್ವಾತಂತ್ರ್ಯ ನೀಡುವ "ಸ್ವಯಂವರ" ಪದ್ಧತಿ.

ಧರ್ಮಶಾಸ್ತ್ರಗಳು ಮತ್ತು ಪುರಾಣಗಳು ಸ್ತ್ರೀಯರ ಪಾತ್ರದ ಮೇಲೆ ನಿರ್ಬಂಧಗಳನ್ನು ಹೇರಿ ಅವರ ಸ್ಥಾನಮಾನವನ್ನು ಇನ್ನಷ್ಟು ಕುಂಠಿತಗೊಳಿಸಿದವು ಎನ್ನಲಾಗಿದೆ. ಬೌದ್ಧಮತದ ಕ್ಷೀಣಿಸುವಿಕೆಯಿಂದ ಇಸ್ಲಾಂ ಮತದ ದಾಳಿ ಆರಂಭವಾಗುವವರೆಗೂ ಧರ್ಮ ಶಾಸ್ತ್ರಗಳು ಹಾಗೂ ಪುರಣಾಗಳು ಪ್ರಭಾವಿಯಾಗಿದ್ದು. ಈ ಅವಧಿಯಲ್ಲಿ ಸ್ತ್ರೀಯರ ಸ್ಥಾನದ ಕುಸಿತ ನಿರಂತರವಾಗಿ ಮುಂದುವರೆಯಿತು. ಗ್ರಹ್ಯಸೂತ್ರಗಳು ಮತ್ತು ವೇದಗಳ ನಂತರದ ಸಾಹಿತ್ಯಗಳಿಂದ ಸ್ಫೂರ್ತಿ ಪಡೆದ ಅನೇಕ ಧರ್ಮಶಾಸ್ತ್ರಜ್ಞರು "ಪುರುಷ ಪ್ರಧಾನತೆಯ ತತ್ವ" ವನ್ನು ಎತ್ತಿ ಹಿಡಿಯುತ್ತಲೇ ಹೋಗಿದ್ದರಿಂದ ಸ್ತ್ರೀಯರ ಹಿತಾಸಕ್ತಿಗೆ ಧಕ್ಕೆಯುಂಟಾಯಿತೆನ್ನಲಾಗಿದೆ.

- **ಸ್ತ್ರೀ ಸಂಬಂಧಿತ ಸಮಸ್ಯೆಗಳ ಉಗಮ –**

ಮನು, ಯಾಜ್ಞವಲ್ಕ್ಯ, ಆಂಗೀರಸ, ಕೌಟಿಲ್ಯ ಮುಂತಾದ ಶಾಸ್ತ್ರಕಾರರು ಸ್ತ್ರೀಯರ ಕುರಿತಾಗಿ ಸದ್ಭಾವನೆಯೊಂದಿಗೆ ಔದಾರ್ಯವನ್ನು ಪ್ರಕಟಿಸಿದ್ದಿರಬಹುದಾದರೂ ಧರ್ಮಶಾಸ್ತ್ರಗಳು ಹಾಗೂ ಪುರಾಣಗಳು ಸ್ತ್ರೀ ಸಂಬಂಧಿತವಾದ ಹಲವು ಸಮಸ್ಯೆಗಳಿಗೆ ಕಾರಣವಾಗಿವೆ ಎನ್ನಲಾಗಿದೆ. "ಬಾಲ್ಯವಿವಾಹ ಪದ್ಧತಿ, ವರದಕ್ಷಿಣೆಯ ಪಿಡುಗು, ಸತೀಪದ್ಧತಿ, ವಿಧವಾ ಸಮಸ್ಯೆ ಹಾಗೂ ದೇವದಾಸಿ ಪದ್ಧತಿ" ಈ ಸಮಸ್ಯೆಗಳ ಉಗಮಕ್ಕೆ ಧರ್ಮಶಾಸ್ತ್ರಗಳು ಹಾಗೂ ಪುರಣಾಣಗಳು

ವಿಧಿಸಿದ ಹಲವಾರು ಕಟ್ಟುಪಾಡುಗಳು ಹಾಗೂ ಆಚರಣೆಗಳು ಕೂಡ ಸ್ವಲ್ಪಮಟ್ಟಿಗೆ ಕಾರಣವಾಗಿದ್ದು ಅವು ಮುಂದೆ ಮದ್ಯಕಾಲೀನ ಯುಗದಲ್ಲಿ ದೊಡ್ಡ ಮಟ್ಟದ ಸಾಮಾಜಿಕ ಪೀಡೆಗಲಾಗಿ ಬೆಳೆದು ನಿಂತವು.

ಬೌದ್ಧಮತದ ಪ್ರಾಬಲ್ಯದ ಕಾಲದಲ್ಲಿ ಮಹಿಳೆಯರ ಸ್ಥಾನಮಾನ ಜಾತಿ ಪದ್ದತಿಯ ದೋಷ – ದೌರ್ಬಲ್ಯಗಳಿಗೆ ಪ್ರತಿಕ್ರಿಯೆ ಎಂಬಂತೆ ಹಬ್ಬಿಕೊಂಡ ಬೌದ್ಧಮತವು ಕ್ರಿಪೂ. ೬ನೇ ಶತಮಾನ ಕ್ಷೀಣಿಸುತ್ತಿದ್ದ ಸ್ತ್ರೀಯರ ಸ್ಥಾನಮಾನವನ್ನು ಸ್ವಲ್ಪ ಮಟ್ಟಿಗಾದರೂ ಸುಧಾರಣೆಗೊಳಿಸಲು ಸಹಾಯಕವಾಯಿತು ಎನ್ನಲಾಗಿದೆ. ಬೌದ್ಧ ಧರ್ಮದ ಪ್ರಕಾರ ಸ್ತ್ರೀಯರಿಗೆ ವಿವಾಹವು ಅನಿವಾರ್ಯವೂ ಅಲ್ಲ. ವೈಧವ್ಯವು ಅವಹೇಳನಾಸ್ಪದವಾದುದೂ ಅಲ್ಲ. ವಿಧವೆಯರೂ ಯಾವುದೇ ಕಳಂಕವಿಲ್ಲದೆ "ಸನ್ಯಾಸಿಮಠಕ್ಕೆ ಸೇರಬಹುದಾಗಿತ್ತು.

ಮಧ್ಯಕಾಲೀನ ಭಾರತದಲ್ಲಿ ಸ್ತ್ರೀಯರ ಸ್ಥಾನಮಾನಗಳು ಕೆಳಮಟ್ಟಕ್ಕೆ ತಲುಪುವುದಕ್ಕೆ ಮುಸ್ಲಿಂ ಆಳ್ವಿಕೆಯೇ ಕಾರಣ ಎನ್ನಬಹುದು. ಮಹಿಳೆಯರ ಜೀವನದ ಗತಿಯೇ ಬದಲಾಯಿತು ಅಷ್ಟೇ ಅಲ್ಲದೆ ಸ್ತ್ರೀಯರ ಸ್ಥಾನಮಾನಗಳು ಅಧೋಗತಿಯನ್ನು ತಲುಪಿದವು. ಸ್ತ್ರೀಯರ ಶೋಷಣೆ ಮೇರೆ ಮೀರಿತು. ಸ್ತ್ರೀ ಸಂಬಂಧವಾದ ಸಮಸ್ಯೆಗಳು ಸಾಮಾಜಿಕ ಪಿಡುಗುಗಳಾಗಿ ಕಾಡತೊಡಗಿದವು. ಪದ್ಮಿನಿ ಸೇನೆ ಗುಪ್ತ ತಿಳಿಸುವಂತೆ ಮಹಮದ್ ಘಸ್ನಿಯ ಆಕ್ರಮಣಕ್ಕೂ ಸ್ವಲ್ಪ ಮೊದಲು ನಮ್ಮ ಪ್ರಾಚೀನ ಶಾಸ್ತ್ರ ಗ್ರಂಥಗಳಿಗೆ ನೀಡಲಾದ ತಪ್ಪು ವ್ಯಾಖ್ಯಾನದಿಂದಾಗಿ ಮತ್ತು ಆ ಬಳಿಕ ಮಧ್ಯಯುಗದ ಕೊನೆಯವರೆಗೆ ಮೂರು ಶತಮಾನಗಳ ಮುಸ್ಲಿಂ ಆಳ್ವಿಕೆಯಲ್ಲಿ ಸ್ತ್ರೀಯರ ಗತಿ ಅತ್ಯಂತ ದಾರೂಣ ಹಾಗೂ ದಯನೀಯವಾಗಿದ್ದು ಆ ಬಗ್ಗೆ ಯಾವ ಭಾರತೀಯನೂ ಹೆಮ್ಮೆ ಪಡುವಂತಿಲ್ಲ. ಸ್ತ್ರೀಯರ ಅಂತಸ್ತು ಸ್ಥಾನಮಾನಗಳ ದೃಷ್ಟಿಯಿಂದಂತೂ ಈ ಅವಧಿ ಅಂಧಕಾರದ ಯುಗವೇ ಆಗಿತ್ತು.

ಬಾಲ್ಯ ವಿವಾಹ ಪದ್ಧತಿ ಮಧ್ಯ ಕಾಲೀನ ಯುಗದಲ್ಲಿ ಅದೊಂದು ಅನಿವಾರ್ಯ ಮತ್ತು ಅಪರಿಹಾರ್ಯ ಪಿಡುಗಿನಂತೆ ಮಾರ್ಪಟ್ಟಿತ್ತು. ದಾಳಿಕೊರರು ಶೀಲಹರಣ ಮಾಡಬಹುದೆಂಬ

ಭಯದಿಂದ ಮತ್ತು ಋತುಮತಿಯರಾದ ಕನ್ಯೆಯರನ್ನು ಅಪಹರಣ ಮಾಡಬಹುದೆಂಬ ಭೀತಿಯಿಂದ ಕನ್ಯ ಪಾತ್ರೆಗಳು ತಮ್ಮ ಹೆಣ್ಣು ಮಕ್ಕಳಿಗೆ ಅವರು ಇನ್ನೂ ಬಾಲ್ಯಾವಸ್ಥೆಯಲ್ಲಿದ್ದಾಗಲೇ ವಿವಾಹ ಮಾಡುವುದು.

ವಿಧವಾ ವಿವಾಹ ನಿಷೇಧ ಧರ್ಮಶಾಸ್ತ್ರಗಳು ವಿಧವಾ ಪುನರ್ವಿವಾಹದ ಮೇಲೆ ವಿಧಿಸಿದ್ದ ನಿಷೇಧಗಳನ್ನು ಈಗ ಕಟ್ಟುನಿಟ್ಟಾಗಿ ಅನುಸರಿಸಲಾಯಿತು ಪಾತಿವ್ರತ್ಯದ ವೈಭವಿಕರಣದಿಂದಾಗಿ ವಿಧವೆಯರು ಪುನಃ ವಿವಾಹ ಮಾಡಿಕೊಳ್ಳುವ ಪ್ರಶ್ನೆಯೇ ಇರಲಿಲ್ಲ.

ಸತಿ ಪದ್ಧತಿ ಸತಿ ಆಚರಣೆ ಎಂದರೆ ಮರಣ ಹೊಂದಿದ ಪತಿಯ ಜೊತೆಯಲ್ಲಿ ಜೀವಂತಳಾಗಿರುವ ಪತ್ನಿ ಸದ್ಗತಿ ಪಡೆಯುವ ನಂಬಿಕೆಯೊಂದಿಗೆ ಚಿತೆಗೇರುವುದು. ಸತಿ ಪದ್ಧತಿಯು ಅನುಮಾನುಷ್ಯವಾದ ಆಚರಣೆ ಮಾತ್ರವಾಗಿದ್ದುದಲ್ಲದೇ ಸ್ತ್ರೀಯರ ಸ್ಥಾನಮಾನದ ಅವನತಿಯನ್ನು ಸಂಕೇತಿಸುವುದು.

- **ಪರದಾ ಪದ್ಧತಿ :**

ವಿದೇಶಿ ಆಕ್ರಮಗಳ ನಂತರ ಸ್ತ್ರೀಯರ ಮೇಲಿನ ಅತ್ಯಾಚಾರಗಳು ಮೇರೆ ಮೀರಿದಾಗ ತಮ್ಮ ರೂಪ, ಸೌಂದರ್ಯಗಳೇ ತಮಗೆ ಶತ್ರುಗಳಾಗಬಾರದೆಂದು ಹಿಂದೂ ಸ್ತ್ರೀಯರೂ ಕೂಡ ಪರದಾ ಧರಿಸ ತೊಡಗಿದರು.

- **ದೇವದಾಸಿ ಪದ್ಧತಿ :**

ಧರ್ಮದ ಹೆಸರಿನಲ್ಲಿ ಸ್ತ್ರೀಯರನ್ನು ಸಂಗೀತ ನೃತ್ಯಗಾತಿಯರನ್ನಾಗಿ ಹಾಗೂ ದೇವಸ್ಥಾನ ಸೇವಕಿಯರನ್ನಾಗಿ ಮುಡಿಪಿಡುವ ಪದ್ಧತಿಯನ್ನು "ದೇವದಾಸಿ ಪದ್ಧತಿ" ಎನ್ನಬಹುದು. ದೇವರ ಸೇವೆಗೆಂದು ಆರಂಭದಲ್ಲಿ ದೈವಭಕ್ತಿ ಹಾಗೂ ಧರ್ಮಶ್ರದ್ಧೆಯಿಂದ ಕೂಡಿದ್ದರೂ ಆ ಬಳಿಕ ಅದು ತನ್ನ ಉದ್ದೇಶವನ್ನು ಕಳೆದುಕೊಂಡಿತು.

ಸುಮಾರು ೧೯೦ ವರ್ಷಗಳವರೆಗೆ ಹಮ್ಮಿಕೊಂಡುನಿಂತ ಬ್ರಿಟಿಷರ ಆಳ್ವಿಕೆಯಲ್ಲಿ ಸಮಾಜದ ಆರ್ಥಿಕ ಹಾಗೂ ಸಾಮಾಜಿಕ ರಚನೆಗಳಲ್ಲಿ ಬಹಳಷ್ಟು ಬದಲಾವಣೆಗಳಾದವು. ಈ ಅವಧಿಯಲ್ಲಿ ಸ್ತ್ರೀಯರ ಅಂತಸ್ಥಿನಲ್ಲಿ ಒಂದಿಷ್ಟು ಬದಲಾವಣೆ ಕಾಣಬಂದಿತು. ಅನೇಕ ರಾಷ್ಟ್ರ ಪ್ರೇಮ ಜನನಾಯಕರುಗಳ ಹಾಗೂ ಸಮಾಜ ಸುಧಾರಕರ ಪರಿಶ್ರಮದ ಫಲವಾಗಿ ಸ್ತ್ರೀಯರಲ್ಲಿ ಜಾಗೃತಿ ಮೂಡಿ ಅವರ ಅಂತಸ್ತಿನಲ್ಲಿ ಸಾಕಷ್ಟು ಸುಧಾರಣೆಗಳಾಗಿವೆ.

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬ್ರಿಟಿಷರ ವಿರುದ್ಧ ಝಾನ್ಸಿಯ ರಾಣಿ ಲಕ್ಷ್ಮೀಬಾಯಿ ಮತ್ತು ಕರ್ನಾಟಕದ ಕಿತ್ತೂರಿನ ರಾಣಿ ಚೆನ್ನಮ್ಮ ಮುಂತಾದವರು ನಡೆಸಿದ ಸಶಸ್ತ್ರ ಹೋರಾಟಗಳು ಇತಿಹಾಸ ಪ್ರಸಿದ್ಧವಿದೆ. ಸತ್ಯಾಗ್ರಹಗಳಲ್ಲಿ ಮಹಿಳೆಯರು ಬಹುದೊಡ್ಡ ಸಂಖ್ಯೆಯಲ್ಲಿ ಭಾಗಿಗಳಾಗುತ್ತಿದ್ದರು. ೧೯೩೦ ರಲ್ಲಿ ಅವರು ನಡೆಸಿದ 'ಉಪ್ಪಿನ ಸತ್ಯಾಗ್ರಹ' ೧೭೦೦ ಮಂದಿ ೧೯೪೨ ರ "ಕ್ವಿಟ ಇಂಡಿಯಾ" ಆಂದೋಲನದಲ್ಲಿ "ಸೇವಾದಳ ಶಿಬಿರ' ಗಳಲ್ಲಿ ಸಹಸ್ರಾರು ಮಂದಿ ಸ್ತ್ರೀಯರೂ ಭಾಗವಹಿಸಿ ಬಂಧಿತರಾಗಿದ್ದರು.

ಸ್ವತಂತ್ರ ಭಾರತದಲ್ಲಿ ಸ್ತ್ರೀಯರ ಸ್ಥಾನಮಾನ ಬಹಳಷ್ಟು ಸುಧಾರಿಸವೆ. ಸ್ತ್ರೀಯರು ಇಂದು ಸಮಾನತೆಯತ್ತ ಸಾಗಿದ್ದಾರೆ. ಇಲ್ಲಿ ಸಂಭವಿಸಿದ ರಾಜಕೀಯ ಹಾಗೂ ಸಾಂಸ್ಕೃತಿಕ ಬದಲಾವಣೆಗಳ ಪರಿಣಾಮವಾಗಿ ಸ್ತ್ರೀಯರಿಗೆ ಶಿಕ್ಷಣ, ಉದ್ಯೋಗ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಸಮಾನಾವಕಾಶಗಳು ಲಭಿಸತೊಡಗಿದವು. ಸ್ತ್ರೀಯರಲ್ಲಿ ಉಂಟಾದ ಜಾಗೃತಿಯಿಂದ ಸ್ತ್ರೀಯರ ಶೊಷಣೆ ಕಡಿಮೆಯಾಯಿತು. ಸರ್ಕಾರದ ಕಡೆಯಿಂದ ಸ್ತ್ರೀಯರ ಒಟ್ಟು ಪಾತ್ರ ಹಾಗೂ ಪರಿಸ್ಥಿತಿಯ ಕುರಿತಾಗಿ ರಾಷ್ಟ್ರಿಯ ನೀತಿಯನ್ನು ರೂಪಿಸುವ ಸಂಶೋಧನೆಗಳನ್ನು ಕೈಗೊಳ್ಳುವ ಮಹಿಳಾ ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸುವ ಮಹಿಳಾ ಆಯೋಗ ವನ್ನು ರಚಿಸುವ ಪ್ರಯತ್ನಗಳೂ ನಡೆದವು.

ಅಧ್ಯಾಯ – ಮೂರು :

ಸಂಘದ ಕಾರ್ಯವೈಖರಿ ಮತ್ತು ವೈಶಿಷ್ಟತೆ

ಅಧ್ಯಾಯ – ಮೂರು :

ಸಂಘದ ಕಾರ್ಯವೈಖರಿ ಮತ್ತು ವೈಶಿಷ್ಟತೆ

ಆಧುನಿಕ ಯುಗದಲ್ಲಿ ಮಹಿಳಾ ಸಬಲೀಕರಣವನ್ನು ಕುರಿತು ಅನೇಕ ಜನರು ಮಾತನಾಡುವುದನ್ನು ಕೇಳಿದ್ದೇವೆ. ಸರ್ಕಾರ, ರಾಜನೀತಿ ತಜ್ಞರು, ಅರ್ಥಶಾಸ್ತ್ರಜ್ಞರು ಸಮಾಜ ಸುಧಾರಕರು ಈ ಸಂಗತಿಯನ್ನು ಕುರಿತು ತಮ್ಮದೇ ಆದ ಆಲೋಚನೆಗಳನ್ನು ವ್ಯಕ್ತಪಡಿಸಿದ್ದಾರೆ.

ಬೀಜಿಂಗ್‌ದಲ್ಲಿ ನಡೆದ ೪ ನೇ ಅಂತರಾಷ್ಟ್ರೀಯ ಮಹಿಳಾ ಸಮ್ಮೇಳನದಲ್ಲಿ ಭಾರತ ಸರ್ಕಾರ ಅಭಿಪ್ರಾಯ ಪಟ್ಟಿರುವಂತೆ ಸಬಲೀಕರಣವೆಂದರೆ ಮಹಿಳೆಯನ್ನು ಅಧಿಕಾರ ರಹಿತತೆಯಿಂದ ಅಧಿಕಾರ ಪಡೆಯುವತ್ತ ಕರೆದುಕೊಂಡು ಬರುವುದು. ಪರಾವಲಂಬನೆಯಿಂದ ಸ್ವಾವಲಂಬನೆಗೆ ಸಾಗಿಸಿಕೊಂಡು ಬರುವುದು.

ಹೆಸರೇ ಸೂಚಿಸುವಂತೆ ಮಹಿಳೆ ಪ್ರತಿಯೊಂದು ಕ್ಷೇತ್ರದಲ್ಲಿ ಧೈರ್ಯ, ಉತ್ಸಾಹ ಹಾಗೂ ಹುಮ್ಮಸಿನಿಂದ ಧುಮುಕುವಂತಾಗಬೇಕು. ಆಕೆ ಪ್ರಬಲ ಬಲಿಷ್ಠ ಹಾಗೂ ಸಶಕ್ತಳಾಗಬೇಕು ಯಾವ ಹಂತದಲ್ಲಿಯೂ ಅವಳು ಇನ್ನೊಬ್ಬರನ್ನು ಅವಲಂಬಿಸಿ ಬದುಕುವಂತಾಗಬಾರದು, ಯಾವ ಹಂತದಲ್ಲಿ ಮಹಿಳೆಯು ಸುಭದ್ರಳಾಗುವುಳೋ ಅಂದಿನಿಂದ ಖಂಡಿತವಾಗಿ ಆಕೆಯ ಸಾಮಾಜಿಕ, ಆರ್ಥಿಕ, ರಾಜಕೀಯ, ಧಾರ್ಮಿಕ ಮತ್ತು ಸಾಂಸ್ಕೃತಿಕ ಸ್ಥಿತಿಗತಿಗಳು ಖಂಡಿತವಾಗಿ ಉತ್ತಮವಾಗುತ್ತವೆ.

ಮಹಿಳಾ ಸಬಲೀಕರಣಕ್ಕಾಗಿ ಈಗಾಗಲೇ ಅನೇಕ ಯೋಜನೆಗಳು ನಮ್ಮಲ್ಲಿ ಅಸ್ತಿತ್ವದಲ್ಲಿರುತ್ತವೆ. ಅವುಗಳಲ್ಲಿ ಅತ್ಯಂತ ಪ್ರಮುಖವಾದವುಗಳೆಂದರೆ ಮಹಿಳೆಗೆ ಬಿಡುವಿನ ವೇಳೆಯಲ್ಲಿ ತರಬೇತಿ ಸಂಸ್ಥೆ, ಮಹಿಳಾ ರಾಷ್ಟ್ರೀಯ ತರಬೇತಿ ಸಂಸ್ಥೆ, ಮಹಿಳೆಯರ ವಸತಿ ನಿಲಯಗಳು, ಮಹಿಳಾ ಕಲ್ಯಾಣ ರಾಷ್ಟ್ರೀಯ ಸಮಿತಿ, ಸಾಮಾಜಿಕ ಸಹಾಯ ಯೋಜನೆ, ಉದ್ಯೋಗ ಮತ್ತು ತರಬೇತಿ ಯೋಜನೆ, ಮಹಿಳಾ ಸಮೃದ್ಧಿ, ಇಂದಿರಾ ಮಹಿಳಾ ಯೋಜನೆ, ಹಾಗೂ ಮಹಿಳಾ ಅಭಿವೃದ್ಧಿ ನಿಗಮ ಮುಂತಾದವುಗಳು.

ಗುಂಪು ರಚನೆಯಲ್ಲಿ ಕಂಡುಬರುವ ಪ್ರಮುಖಾಂಶಗಳು

೧) ಸಮಾನ ಆಸಕ್ತಿ, ಸಮಾನ ಪರಿಸ್ಥಿತಿ, ವರ್ಗದ ಜನರನ್ನು ಒಳಗೊಂಡಿರುತ್ತದೆ.

೨) ನಿರ್ದಿಷ್ಟ ಉದ್ದೇಶ ಹೊಂದಿ ಈ ಉದ್ದೇಶದ ಈಡೇರಿಕೆಗಾಗಿ ಕಾರ್ಯಕ್ರಮ ರೂಪಿಸುವ ಸಂಘಟಿತ ವೇದಿಕೆಯಾಗಿದೆ.

೩) ಉದ್ದೇಶ ದೀರ್ಘಕಾಲ ಹಾಗೂ ಅಕಾಲಿಕ ಎಂದು ವಿಂಗಡಿಸಬೇಕು

೪) ಸದಸ್ಯರ ಸಮಸ್ಯೆಯನ್ನು ಪರಿಹರಿಸುವ ಕಾರ್ಯಕ್ರಮವಿರಬೇಕು.

೫) ಒಂದು ಗುಂಪಿನಲ್ಲಿ ೧೫ ರಿಂದ ೨೦ ಆರ್ಥಿಕವಾಗಿ ಹಿಂದುಳಿದ ಮಹಿಳೆಯರ ಭಾಗವಸುವಿಕೆ ಇರುತ್ತದೆ.

೬) ಸದಸ್ಯರ ಆರ್ಥಿಕ ಮತ್ತು ಸಮಾಜದ ಅವಶ್ಯಕತೆ ಈಡೇರಿಕೆಗೆ ಅನುಗುಣವಾದ ಗುಂಪು ಕಾರ್ಯಕ್ರಮಗಳನ್ನು ರೂಪಿಸುತ್ತದೆ.

೭) ಸದಸ್ಯರು ತಮ್ಮ ಉಳಿತಾಯವನ್ನು ಗುಂಪಿನಲ್ಲಿಯೇ ಶೇಖರಿಸಿಡುತ್ತಾರೆ.

೮) ಉಳಿತಾಯವನ್ನು ಸದಸ್ಯರ ಸಾಲಕ್ಕೆ ನೀಡುತ್ತಾರೆ.

೯) ಗುಂಪಿನ ಸದಸ್ಯರ ಹೆಸರು, ಸ್ಥಳ, ಸೇರ್ಪಡೆ ಕಾರ್ಯಗಳ ಬಗ್ಗೆ ಬೈಲಾ ತಿಳಿಸಿಕೊಡುತ್ತದೆ.

೧೦) ಗುಂಪಿನಲ್ಲಿ ಕಂಡುಬರುವ ಪ್ರಮುಖ ಪುಸ್ತಕಗಳು

ಸದಸ್ಯರ ನೋಂದಣಿ ಪುಸ್ತಕ

- ಗುಂಪಿನ ಹೆಸರು : ಲಕ್ಷ್ಮೀ ಸಂಘ. ಸದಸ್ಯತ್ವ ಸಂಖ್ಯೆ: ೨೦
- ಗ್ರಾಮದ ಹೆಸರು : ಉಗಾರ ಖುರ್ದ.
- ಸದಸ್ಯಳ ಹೆಸರು : ಅನಿತಾ ಮ ಕಾಂಬಳೆ
- ತಾಯಿ/ತಂದೆ/ಗಂಡ/ಹೆಂಡತಿ/ಹೆಸರು : ಮಹಾದೇವ
- ಗುಂಪು ಸೇರಿದ ದಿನಾಂಕ : ೪/೧೦/೨೦೧೧ ಪ್ರವೇಶ ಧನ ರೂ.೨೦
- ನಗದು ರಶೀದಿ ಸಂಖ್ಯೆ ಮತ್ತು ದಿನಾಂಕ : ೧೦. ೧೨-೧೧-೨೦೧೧
- ಸದಸ್ಯಳ ವಯಸ್ಸು(ಜನ್ಮ ದಿನಾಂಕ) : ೪೦
- ಜಾತಿ/ಪಂಗಡ: ಎಸ್.ಸಿ ವಿದ್ಯಾಭ್ಯಾಸ ಮಟ್ಟ : ೭

ನಡುವಳಿಕೆ ಪುಸ್ತಕ

ಖಾತೆ ಸಂಖ್ಯೆ	ಸದಸ್ಯಳ ಹೆಸರು	ಉಳಿತಾಯ	ಸಾಲ ಮರುಪಾವತಿ		ಸಾಲದ ಮರುಪಾವತಿ	ದಂಡ	ಕೊಡುಗೆ	ಒಟ್ಟು ಮೊತ್ತ
			ಅಸಲು	ಶೇ. ಶುಲ್ಕ				
೧	ಚಂದ್ರಮ್ಮ	೧೦.೦೦	೧೦೦	೧೦.೦೦	ವ್ಯಾಪಾರ	–	–	೧೨೦
೨	ಶಾರದಮ್ಮ	೧೫.೦೦	೧೫೦	೨೫.೦೦	ಹಸು	–	–	೧೯೦
೩	ರತ್ನಮ್ಮ	೧೫.೦೦	೨೦೦	೫೦.೦೦	ವಿದ್ಯಾಭ್ಯಾಸ	೧೦.೦೦	–	೨೭೫
೪	ಕೆಂಪಮ್ಮ	೧೦.೦೦	೧೭೫	೨೫.೦೦	ವ್ಯಾಪಾರ	–	೧೦೦	೩೧೦
	ಒಟ್ಟು ಮೊತ್ತ	೫೦.೦೦	೬೨೫	೧೧೦		೧೦.೦೦	೧೦೦	೮೯೫

ನಡವಳಿಕೆಯು ಒಂದು ಮಾದರಿ

ಸಭೆಯ ಸಂಖ್ಯೆ : ೪೧

ಗುಂಪಿನ ಹೆಸರು :ಲಕ್ಷ್ಮೀ ಸ್ತ್ರೀಶಕ್ತಿ ಸಂಘ.

ಸ್ಥಳ : ಪದ್ಮಾವತಿ ಶ್ರೀಪಾಲ ಕೋಥಳೆ

ದಿನಾಂಕ :೧೨/೧೧/೨೦೧೧

ಪ್ರಾರಂಭದ ಸಮಯ :ಮದ್ಯಾಹ್ನ ೩ ಗಂಟೆಗೆ

ಮುಕ್ತಾಯದ ಸಮಯ :ಮದ್ಯಾಹ್ನ ೫ ಗಂಟೆ

ಸಭೆ ನಡೆಸುವವರು : ಶ್ರೀಮತಿ ಮಂಗಲ ವಿಜಯ ಮಾಳಿ

ಒಟ್ಟು ಹಾಜರಾತಿ : ೧೮

ಗೈರು : ೨

ಸಭೆಗೆ ಹಾಜರಿದ್ದ ಅತಿಥಿಗಳು : ೧. ಶ್ರೀಮತಿ ಧನಶ್ರೀ ರಮೇಶ ನಾಯಕ

೨. ಶ್ರೀ ವಿಜಯ ಡಿ.ಸಿ.ಸಿ ಬ್ಯಾಂಕ್

ಪ್ರಾರ್ಥನೆ : ಶ್ರೀಮತಿ ಅನಿತಾ ಸಂಜು ಲಾಂಡಗೆ.

ಸ್ವಾಗತ : ಶ್ರೀಮತಿ ಇಂದುಮತಿ ಭೂಪಾಲ ಢೇರೆ.

ಸಭೆಯಲ್ಲಿ ಚರ್ಚಿಸಿದ ವಿಷಯ :

೧. ಹಿಂದಿನ ಸಭೆಯ ತಿರ್ಮಾನ ಓದಿ ಅನುಮೋದಿಸಿತು.

೨. ಗುಂಪಿಗೆ ಜಮಾ ತೆಗೆದುಕೊಳ್ಳುವುದು.(ಉಳಿತಾಯ, ಸಾಲ, ಮರುಪಾವತಿ, ದಂಡ ಇತ್ಯಾದಿ).

೩. ಸಂಘದಿಂದ ಖರ್ಚು(ಸಾಲ ವಿತರಣೆ ಇತ್ಯಾದಿ)

೪. ಶೌಚಾಲಯ ನಿರ್ಮಾಣದ ಬಗ್ಗೆ

೫. ಶ್ರೀಮತಿ ಗಂಗವ್ವಳ ಬಗ್ಗೆ ವಯಕ್ತಿಕ ಸಮಸ್ಯೆ.

೬. ಇತರೆ ವಿಷಯ

ಹಾಜರಿ ಪುಸ್ತಕ

ಹಾಜರಿ ಪುಸ್ತಕದ ನಮೂನೆ:

ಸದಸ್ಯತ್ವ ಸಂಖ್ಯೆ	ಸದಸ್ಯರ ಹೆಸರು	ಸ.ದಿ, ೨-೧೧-೦೧ ಸ.ಸಂ.೬೫	ಸದಿ: ೧೦.೧೧.೦೧ ಸ ಸಂ:೬೬	ಸದಿ:೧೮.೧೧.೦೧ ಸ ಸಂ: ೬೭	ಸ ದಿ: ೨೬:೧೦:೦೧ ಸ ಸಂ: ೬೮	ಒಟ್ಟು ಹಾಜರಿ	ಒಟ್ಟು ಸಭೆ
೧	ಶಾರದಮ್ಮ	ಹ	ಹ	ಹ	ಹ	೪	೪
೨	ರತ್ನಮ್ಮ	ಹ	ಹ	ಗ	ಹ	೩	೪
೩	ಭಾಗಿರಥಿ	ಹ	ಗ	ಗ	ಹ	೨	೪
೪	ಲಲಿತಮ್ಮ	ಗ	ಹ	ಹ	ಹ	೩	೪
	ಒಟ್ಟು ಹಾಜರಾತಿ	೩	೩	೨	೪	೧೨	೧೬
	ಹಾಜರಿ ಹಾಕಿದವರ ಸಹಿ						

ಸದಸ್ಯರ ವೈಯಕ್ತಿಕ ಪಾಸ್ ಪುಸ್ತಕ

ಗುಂಪಿನ ಹೆಸರು: ಲಕ್ಷ್ಮೀ ಸ್ತ್ರೀಶಕ್ತಿ ಸಂಘ

(ಇಲ್ಲಿ ಸಂಘದ ಸೀಲ್ ಹಾಕಿ)

ಫೋಟೋ

ಸದಸ್ಯತ್ವ ಸಂಖ್ಯೆ : ೩

ಸದಸ್ಯತ್ವ ಪಡೆದ ದಿನಾಂಕ: ೫/೯/೨೦೧೧

ಸದಸ್ಯರ ಹೆಸರು : ಮಂಗಲ ವಿಜಯ ಮಾಳಿ

ಪೂರ್ಣ ವಿಳಾಸ : ಮಂಗಲ ವಿಜಯ ಮಾಳಿ

ಅಂಬೇಡ್ಕರ ಕಾಲೋನಿ ಉಗಾರಖುರ್ದ

- ಸದಸ್ಯರಿಗೆ ಸದಸ್ಯತ್ವದ ಗುರುತು ಪಡೆಯುವಂತಾಯಿತು.
- ಕಾನೂನು ಮಾನ್ಯತೆ ಇಲ್ಲದಿದ್ದರೂ ಸಹ ಜವಾಬ್ದಾರಿಯುತ ಹಣಕಾಸು ವ್ಯವಸ್ಥೆಯುಳ್ಳ ಸಂಸ್ಥೆಯಾಗಿ ಬೆಳೆಯಲು ಗುಂಪಿಗೆ ಸ್ವಪಾಸ್ ಪುಸ್ತಕ ದೊರಕಿಸುವುದು.
- ಒಂದು ಗುಂಪಿನಲ್ಲಿ ೨೦ ಕ್ಕಿಂತ ಹೆಚ್ಚಿನ ಸದಸ್ಯರ ಇಲ್ಲವಾದರಿಂದ ಪ್ರತಿ ಗುಂಪು ಪಾಸ್ ಪುಸ್ತಕವನ್ನು ಮುದ್ರಿಸಲು ಸಾದ್ಯವಿಲ್ಲ.

ಗುಂಪಿನ ಬ್ಯಾಂಕ್ ಪಾಸ್ ಪುಸ್ತಕ:

- ಗುಂಪು ಬ್ಯಾಂಕ ಖಾತೆಯನ್ನು ಗುಂಪಿನ ಹೆಸರಿನಲ್ಲಿ ತಗೆಯಬೇಕೆ ಹೊರತು, ಸಂಘದ ಪ್ರತಿನಿಧಿಗಳ ಹೆಸರಿನಲ್ಲಿ ತೆಗೆಯಬಾರದು. ಬ್ಯಾಂಕ ಪಾಸ್ ಪುಸ್ತಕದಲ್ಲಿ ಗುಂಪಿನ ಹೆಸರಿರಬೇಕು.
- ಈ ಪುಸ್ತಕದಲ್ಲಿ ಗುಂಪು ಬ್ಯಾಂಕಿನಲ್ಲಿ ನಡೆಯುವ ಹಣದ ವ್ಯವಹಾರವನ್ನು ಬ್ಯಾಂಕಿನವರು ದಾಖಲಿಸಿರುತ್ತಾರೆ. ಇದರಲ್ಲಿನ ಮಾಹಿತಿಯು ಗುಂಪು ನಗದು ಪುಸ್ತಕದ 'ಬ್ಯಾಂಕ್ ಕಲಂ'ನ ಮಾಹಿತಿಗೆ ತಾಳೆಯಾಗಬೇಕು.
- ಬ್ಯಾಂಕ ಮುಖಾಂತರ ನಡೆಸುವ ಗುಂಪಿನ ವ್ಯವಹಾರಗಳು ಪುಸ್ತಕದಲ್ಲಿ ತಕ್ಷಣವೇ ದಾಖಲಾಗುವಂತೆ ನೋಡಿಕೊಳ್ಳಬೇಕು,
- ಪ್ರತಿ ವಾರ ಸಭೆಯ ನಂತರ ಹಣ ಕಟ್ಟಲು ಹೋಗುವವರು ಆ ದಿನಾಂಕದವರೆಗೂ ಪಾಸ್ ಪುಸ್ತಕದಲ್ಲಿ ದಾಖಲಾತಿಯನ್ನು ಮಾಡಿಸಿಕೊಂಡು ಬರಬೇಕು, ಇದು ದಾಖಲಾಗುವುದು ತಡವಾದರೆ ಗುಂಪಿನ ವ್ಯವಹಾರದಲ್ಲಿ ತಪ್ಪುಗಳು ಉಂಟಾಗುವ ಸಾಧ್ಯತೆ ಇರುತ್ತದೆ.
- ಕೆಲವು ಸಾರಿ ಬ್ಯಾಂಕ್ ಪಾಸ್ ಪುಸ್ತಕದಲ್ಲಿ ನಮೂದಿಸಿದ ಮೊತ್ತಕ್ಕೂ ಹಾಗು ನಗದು ಪುಸ್ತಕದ ಮೊತ್ತಕ್ಕೂ ತಾಳೆಯಾಗದಿರಬಹುದು.

ಚೆಕ್ ಪುಸ್ತಕ

ಚೆಕ್ಕ ಪುಸ್ತಕ ಬಳಸುವ ಕುರಿತು ಗುಂಪುಗಳಿಗೆ ನೀಡುವ ತರಬೇತಿಯಲ್ಲಿ ಈ ಕೆಳಗಿನ ಮಾಹಿತಿಯನ್ನು ಮಾರ್ಗದರ್ಶಿಕೆಯಾಗಿ ಬಳಸಬಹುದು.

- ಗುಂಪು ಸಾದ್ಯವಾದಷ್ಟು ಚೆಕ್ ಮುಖಾಂತರವೇ ವ್ಯವಹಾರ ನಡೆಸಬೇಕು. ನಗದು ವ್ಯವಹಾರ ಆರೋಗ್ಯಕರ ಪದ್ದತಿಯಲ್ಲ.
- ಚೆಕ್ ವ್ಯವಹಾರದಲ್ಲಿ ೩ ವ್ಯಕ್ತಿಗಳು ಬಾಗಿಯಾಗಿರುತ್ತಾರೆ.

  ೧. ಕೊಡುವವರು

  ೨. ತೆಗೆದುಕೊಳ್ಳುವವರು

  ೩. ಬ್ಯಾಂಕ್

- ಚೆಕ್ ಮೇಲೆ ನೇಮಕ ಮಾಡಿರುವ ೨ ಪ್ರತಿನಿಧಿಗಳು ಸಹಿ ಮಾಡಿದರೆ ಮಾತ್ರ ಚೆಕ್ ಮಾನ್ಯ ಮಾಡಬೇಕೆಂದು ಸಂಘವು ಬ್ಯಾಂಕಿಗೆ ಪತ್ರದ ಮುಖಾಂತರ ತಿಳಿಸುವುದು.
- ನೇಮಕಗೊಂಡಿರುವವರ ಸಹಿ ಮಾದರಿಯನ್ನು ಪತ್ರದಲ್ಲಿ ತಿಳಿಸುವುದು.
- ಬ್ಯಾಂಕಿನವರು ಚೆಕ್ ಸಹಿ ಮಾಡಿರುವವರ ಪೋಟೋ ಕೇಳುವುದರಿಂದ ಅದನ್ನು ಒದಗಿಸಬೆಕು.
- ಈ ಮೇಲಿನ ವ್ಯವಸ್ಥೆಗಳು ಹಣದ ದುರುಪಯೋಗವಾಗುವದನ್ನು ಕಡಿಮೆ ಮಾಡುತ್ತದೆ.
- ಚೆಕ್‌ಗೆ ಸಹಿ ಮಾಡುವ ೨ ಪ್ರತಿನಿದಿಗಳನ್ನು ಗುಂಪಿನ ಇಲ್ಲಾ ಸದಸ್ಯರು ಒಪ್ಪಿ ನೇಮಕ ಮಾಡಬೇಕು. ಈ ಆಯ್ಕೆಯನ್ನು ನಡವಳಿಕೆಯನ್ನು ಪುಸ್ತಕದಲ್ಲಿ ಬರೆಯಬೇಕು.
- ನೇಮಕವಾದ ೨ ಪ್ರತಿನಿಧಿಗಳನ್ನು ಪ್ರತಿ ವರ್ಷ ಬದಲಾಯಿಸಬೇಕು, ಇದರಿಂದ ಇಲ್ಲಾ ಸದಸ್ಯರು ಬ್ಯಾಂಕ ವ್ಯವಹಾರ ತಿಳಿದುಕೊಳ್ಳಲು ಸಹಾಯ ಮಾಡುತ್ತದೆ.

- ಗುಂಪಿನ ಸದಸ್ಯರಲ್ಲದವರಿಗೆ ಚೆಕ್‌ಗೆ ಸಹಿ ಮಾಡುವ ಅಧಿಕಾರವನ್ನು ಯಾವ ಕಾರಣಕ್ಕೂ ಕೊಡಬಾರದು.
- ಪುಸ್ತಕ ಬರೆಯುವವರು ಗುಂಪಿನ ಸದಸ್ಯರಲ್ಲದಿದ್ದರೆ ಅವರಿಗೆ ಚೆಕ್‌ಗೆ ಸಹಿ ಮಾಡುವ ಅಧಿಕಾರ ನೀಡಬಾರದು.
- ಬ್ಯಾಂಕ್ ಖಾತೆಯಲ್ಲಿ ಹಣವಿದ್ದರೆ ಮಾತ್ರ ಚೆಕ್ ನೀಡಬೇಕು. ಖಾತೆಯಲ್ಲಿ ಹಣವಿಲ್ಲದೆ ಚೆಕ್ ವಾಪಸ್ಸಾದರೆ ಅಪರಾಧವಾಗುತ್ತದೆ.
- ಖಾಲಿ ಚೆಕ್‌ನಲ್ಲಿ ಯಾವ ಕಾರಣಕ್ಕೂ ಸಹಿ ಮಾಡಬಾರದು.
- ಚೆಕ್‌ನಲ್ಲಿ ಹೆಸರು, ದಿನಾಂಕ ಮತ್ತು ಮೊತ್ತವನ್ನು ಬರೆದ ನಂತರ ಸಹಿ ಮಾಡಬೇಕು.

ಜಮಾ ಮತ್ತು ಖರ್ಚು ರಶೀದಿ

<table>
<tr><td colspan="2">ದುರ್ಗಾ ಸ್ತ್ರೀಶಕ್ತಿ ಸಂಘ ಸ್ತ್ರೀಶಕ್ತಿ ಗುಂಪು</td></tr>
<tr><td>ಗ್ರಾಮ: ಉಗಾರ ಖುರ್ದ</td><td>ತಾಲೂಕು: ಅಥಣಿ ಜಿಲ್ಲೆ: ಬೆಳಗಾವಿ</td></tr>
<tr><td>ಇಂದ, ೧-೪-೨೦೧೧</td><td>ಗೆ: ೧೮-೭-೨೦೧೧</td></tr>
</table>

ನಗದು ಬ್ಯಾಂಕ್ ಪುಸ್ತಕ

ಲಘು ನಗದು ಪುಸ್ತಕ

ವೈಯಕ್ತಿಕ ಉಳಿತಾಯ ಮತ್ತು ಸಾಲದ ಖಾತೆ ಪುಸ್ತಕ

<table>
<tr><td colspan="2">ಸಾಲದ ಖಾತೆ ಪುಸ್ತಕ</td></tr>
<tr><td>. . . . .</td><td>ಉಳಿತಾಯ ಖಾತೆ ಪುಸ್ತಕ</td></tr>
<tr><td>ಗ್ರಾಮ: ಉಗಾರ ಖುರ್ದ ತಾ:ಅಥಣಿ</td><td>______ಸ್ತ್ರೀಶಕ್ತಿ ಸಂಘ</td></tr>
<tr><td></td><td>ಗ್ರಾಮ: ಉಗಾರ ಖುರ್ದ ತಾ:ಅಥಣಿ ಜಿಲ್ಲೆ:</td></tr>
<tr><td>ಬೆಳಗಾವಿ.</td><td></td></tr>
<tr><td>ಇಂದ</td><td>ಇಂದ___ ಗೆ______</td></tr>
</table>

ಅಂತಿಮ ಲೆಕ್ಕ ಪತ್ರಿಕೆಗಳು

ಮೇಲೆ ತಿಳಿಸಿದ ಅಂಶಗಳು ಗುಂಪಿನಲ್ಲಿ ಕಂಡು ಬರುವಂತಹ ಪ್ರಮುಖ ಅಂಶಗಳಾಗಿವೆ.

- **ಗುಂಪು ಹೊಂದಿರಬೇಕಾದ ಮೂಲಭೂತ ಅವಶ್ಯಕತೆಗಳ ಪಟ್ಟಿ**

೧) ನಿರ್ಧಿಷ್ಟ ಉದ್ದೇಶ ಈಡೇರಿಸಲು ಸಂಘದಲ್ಲಿ ನಿಯಮ ನಿರ್ಬಂಧನೆಗಳಿರಬೇಕು.

೨) ಸಂಘದಲ್ಲಿರಬೇಕಾದ ನಿಯಮ, ನಿರ್ಬಂಧನೆಗಳನ್ನು ಸದಸ್ಯರೊಟ್ಟಿಗೆ ಸೇರಿ ನಿರ್ಧರಿಸಬೇಕು.

೩) ಸಂಘದ ಸದಸ್ಯರು ನಿಯಮ ನಿರ್ಬಂಧನೆಗಳಿಗೆ ಬದ್ಧರಾಗಿರಬೇಕು.

೪) ಸ್ತ್ರೀ ಶಕ್ತಿ ಸಂಘದಲ್ಲಿ ೨೦ ಸದಸ್ಯರನ್ನು ಹೊಂದಿರಬೇಕು.

೫) ಸ್ತ್ರೀ ಶಕ್ತಿ ಸಂಘವು ತಮ್ಮದೇ ಆದ ಸೀಲ್‌ನ್ನು ಹೊಂದಿರಬೇಕು.

೬) ಸದಸ್ಯರ ನೋಂದಣಿ ಪುಸ್ತಕವನ್ನು ಹೊಂದಿರಲೇಬೇಕು.

೭) ಸಂಘದಲ್ಲಿ ಪರಿಶಿಷ್ಟ ಜಾತಿ / ಪಂಗಡದ ಸದಸ್ಯರು ಇರುವ ಹಾಗೆ ನೋಡಿಕೊಳ್ಳಬೇಕು.

೮) ಪ್ರತಿ ವಾರಕ್ಕೊಮ್ಮೆ ಸಭೆ ಸೇರಬೇಕು, ಸಂಘದ ಕಾರ್ಯ ಚಟುವಟಿಕೆಗಳನ್ನು ಚರ್ಚಿಸಬೇಕು.

- **ನಿಯಮ ನಿರ್ಬಂಧನೆಗಳನ್ನು ರೂಪಿಸುವಾಗ ಲಕ್ಷಿಸುವ ಅಂಶಗಳು**

೧) ಗುಂಪಿನ ಹೆಸರು

೨) ಗುಂಪಿನ ಮುಖ್ಯ ಕಛೇರಿ, ಸ್ಥಳ ಹಾಗೂ ವಿಳಾಸ ನಮೂದಿಸಬೇಕು.

೩) ಗುಂಪು ಹೊಂದಿದ ನಿರ್ಧಿಷ್ಟವಾದ ಉದ್ದೇಶವನ್ನು ಸ್ಪಷ್ಟವಾಗಿ ಹೇಳಬೇಕು.

೪) ಸಾಂದರ್ಭಿಕ ಮತ್ತು ಪೂರಕ ಉದ್ದೇಶಗಳನ್ನು ಅಗತ್ಯವಿದ್ದಲ್ಲಿ ಮಾತ್ರ ಹೇಳಬೇಕು.

೫) ಸದಸ್ಯರ ದಾಖಲಾತಿ ಪುಸ್ತಕ, ಹೆಸರು, ವಿಳಾಸ ಮತ್ತು ನೋಂದಣಿ ತಾರೀಖನ್ನು ಒಳಗೊಂಡಿರಬೇಕು.

• **ನಿಯಮ ನಿರ್ಬಂಧನೆಗಳು**

೧) ಸಂಘದ ಹೆಸರು, ಸರ್ವಸದಸ್ಯರ ಸಭೆ, ಆಡಳಿತ ಸಮಿತಿ, ನಿಯಮಗಳು, ಸಂಘದ ಅಧಿಕಾರಿಗಳ ಆಡಳಿತ ವರ್ಗ, ಸಂಘದ ನಿಧಿ ಮತ್ತು ಆದಾಯ ಹಾಗೂ ಸಂಘದ ಕಾರ್ಯ ಚಟುವಟಿಕೆಗಳಿಂದಾಗುವ ಲಾಭದ ಬಗ್ಗೆ ಸಂಕ್ಷಿಪ್ತ ವಿವರಣೆ ಇರಬೇಕು.

೨) ಸಂಘದಲ್ಲಿ ಸ್ಥಾಪಕ ಸದಸ್ಯರು, ಗೌರವ ಸದಸ್ಯರು ಮತ್ತು ಸಾಮಾನ್ಯ ಸದಸ್ಯರಗಳು ಇರುವ ಕುರಿತು ಮಾಹಿತಿ ನೀಡಬೇಕು.

೩) ಸದಸ್ಯತ್ವ ಪಡೆಯುವಿಕೆ ಮತ್ತು ಸದಸ್ಯತ್ವ ಶುಲ್ಕ ಮತ್ತು ಚಂದಾ ಹಣದ ಕುರಿತು ಮಾಹಿತಿ ನೀಡಬೇಕು.

೪) ಸದಸ್ಯತ್ವ ಹಣದ ಉಪಯೋಗದ ಕುರಿತು ಸ್ಪಷ್ಟಪಡಿಸಬೇಕು.

೫) ಸದಸ್ಯತ್ವ ಅನೂರ್ಜಿತಗೊಳಿಸುವ ಬಗ್ಗೆ ಮಾಹಿತಿ ಇರಬೇಕು.

೬) ಸಮಿತಿಗಳ ಕುರಿತು ಸ್ಪಷ್ಟಪಡಿಸಬೇಕು.

೭) ಸರ್ವ ಸದಸ್ಯರು, ಕಾರ್ಯಕಾರಿ ಸಮಿತಿ ಹಾಗೂ ಸಭೆಯ ನೋಟಿಸು ಮತ್ತು ಸಭೆ ಬಗ್ಗೆ ಸ್ಪಷ್ಟವಾಗಿ ಹೇಳಬೇಕು.

೮) ಕೋರಂ: ಸರ್ವ ಸದಸ್ಯರ ಸಭೆ ಮತ್ತು ಕಾರ್ಯಕಾರಿ ಸಮಿತಿ ಸಭೆಗೆ ಕನಿಷ್ಠ ಮೂರನೇ ಒಂದು ಭಾಗ ಜನ ಸದಸ್ಯರು ಹಾಜರಿದ್ದರೆ ಕೋರಂ ಎಂದು ನಮೂದಿಸಬೇಕು.

೯) ಬ್ಯಾಂಕ್ ಲೆಕ್ಕ ಅಥವಾ ಹಣಕಾಸಿನ ಲೆಕ್ಕಾಚಾರದ ಬಗ್ಗೆಯೂ ಹೇಳಬೇಕು.

೧೦) ಕರ್ತವ್ಯ ಮತ್ತು ಜವಾಬ್ದಾರಿಗಳ ಬಗ್ಗೆ ಸ್ಪಷ್ಟವಾಗಿ ಹೇಳಬೇಕು.

೧೧) ಅಧ್ಯಕ್ಷರ, ಉಪಾಧ್ಯಕ್ಷರ, ಖಜಾಂಚಿ, ಕಾರ್ಯದರ್ಶಿ ಸಹಕಾರ್ಯದರ್ಶಿಯವರ ಹಾಗೂ ಗುಂಪಿನ ಪ್ರತಿನಿಧಿಗಳ ಕಾರ್ಯದ ಬಗ್ಗೆ ಸ್ಪಷ್ಟವಾದ ಮಾಹಿತಿ ನೀಡಬೇಕು.

೧೨) ಗುಂಪಿನಲ್ಲಿ ಸದಸ್ಯರ ಪುಸ್ತಕ, ನಗದು ಪುಸ್ತಕ, ಖಾತೆ ಪುಸ್ತಕ, ಸಭೆಗಳ ನಡುವಳಿಕೆಗಳ ಪುಸ್ತಕ, ರಶೀದಿ ಪುಸ್ತಕ ಮತ್ತು ವೋಚರಗಳು ಇದು ಕಾರ್ಯದರ್ಶಿಗಳ ಸ್ವಾದೀನದಲ್ಲಿರಬೇಕು.

೧೩) ಪ್ರತಿ ೬ ತಿಂಗಳಿಗೊಮ್ಮೆ ಆಥವಾ ವರ್ಷಕ್ಕೊಮ್ಮೆ ಲೆಕ್ಕಪರಿಶೋಧನೆಯ ವಿವರಣೆ ಹೇಳಬೇಕು.

೧೪) ಗುಂಪಿನ ವಿಸರ್ಜನೆ ಸಂಘದ ಕಾರ್ಯಾಲಯದ ಮೇಲೆ ಇವನ್ನು ತಿಳಿಸಬೇಕು. ಮೇಲೆ ತಿಳಿಸಿದ ಎಲ್ಲ ನಿಯಮ ನಿರ್ಬಂಧನೆಗಳ ಬಗ್ಗೆ ಸಂಘದ ಸದಸ್ಯರಿಗೂ, ಪ್ರತಿನಿಧಿಗಳಿಗೂ, ಸಂಘದ ಮೇಲ್ವಿಚಾರಕರಿಗೂ ತಿಳಿಸಿಕೊಡುವದಾಗಿದೆ.

ಸಂಘದ ಪ್ರತಿನಿಧಿಗಳು ಹಾಗೂ ಮೇಲ್ವಿಚಾರಕರು ಹೊಂದಿರಬೇಕಾದ ಕೆಲವು ಜವಾಬ್ದಾರಿಯುತ ಕಾರ್ಯಗಳು.

- ಗುಂಪಿನಲ್ಲಿ ಉಂಟಾಗುವ ಸಂಘರ್ಷಗಳನ್ನು ತತಕ್ಷಣ ನಿವಾರಣೆ ಮಾಡುವುದು
- ಸಮಯಕ್ಕನುಗುಣವಾಗಿ ಸಭೆಯನ್ನು ನಡೆಸುವುದು
- ನಿಯಮಿತವಾಗಿ ಸಭೆ ನಡೆಸುವಂತಿರಬೇಕು
- ಜವಾಬ್ದಾರಿಯತೆಯಿಂದಲೇ ಸದಸ್ಯರ ಪಾತ್ರವನ್ನು ಹಂಚಿಕೆ ಮಾಡಬೇಕು
- ಸಾಮಾನ್ಯ ನಿರ್ವಹಣೆ
- ಸಂಘದ ಸದಸ್ಯರು ನಿರ್ವಹಣೆ ಕಾಲಕ್ಕೆ ಅನುಗುಣವಾಗಿರಬೇಕು
- ಗುಂಪುಗಳ ಚರ್ಚೆಯ ಕಾರ್ಯಗಳನ್ನು ನಿಗದಿಗೊಳಿಸಿದ ಸಮಯಕ್ಕೆ ಹಾಗೂ ದಿನಕ್ಕೆ ಸಂಬಂಧಿಸಿದಂತೆ ಸರಿಯಾಗಿ ನಡೆಯುವಂತಿರಬೇಕು.

❖ **ಗುಂಪು ಸಭೆಯಲ್ಲಿ ಕಂಡು ಬರುವ ಸಾಮಾನ್ಯ ಪ್ರಕ್ರಿಯೆಗಳು**

೧) ಹಿಂದಿನ ಸಭೆಯ ತೀರ್ಮಾನಗಳನ್ನು ಓದುವುದು

೨) ಗುಂಪಿನಲ್ಲಿ ಆಗಿರುವ ಕಾರ್ಯಗಳ ಬಗ್ಗೆ ಗುಂಪಿನ ಸದಸ್ಯರಿಗೆ ತಿಳಿಸುವದು

೩) ಸಭೆಯ ಕಾರ್ಯ ಸೂಚಿಯನ್ನು ತಯಾರಿಸುವದು

೪) ಪ್ರತಿ ಸಭೆಯಲ್ಲಿ ಪ್ರಾರ್ಥನೆ ಅಥವಾ ಸಮುದಾಯ ಗೀತೆಯ ಮೂಲಕವೇ ಅಂದಿನ ಸಭೆ ಆರಂಭವಾಗುತ್ತದೆ.

೫) ಹಿಂದಿನ ತಿಂಗಳ ಹಣಕಾಸಿನ ಸ್ಥಿತಿಗತಿಗಳ ಬಗ್ಗೆ ವಿವರವಾದ ಮಾಹಿತಿಯನ್ನು ಗುಂಪಿನ ಪ್ರತಿನಿಧಿಗಳು ನೀಡುತ್ತಾರೆ

೬) ಉಳಿತಾಯ ಹಣದ ಸಂಗ್ರಹಣ ಮಾಡುವದು

೭) ಸಾಲದ ಅವಶ್ಯಕತೆಯಿರುವವರಿಗೆ ಸಾಲವನ್ನು ನೀಡುವುದು

೮) ಮರು ಪಾವತಿಯ ಬಗ್ಗೆ ಮಾಹಿತಿಯನ್ನು ಸಾಲ ತಗೆದುಕೊಂಡ ಸದಸ್ಯರಿಗೆ ತಿಳಿಸುವದು

೯) ಉಪಯೋಗದ ಬಗ್ಗೆ ಚರ್ಚೆ

೧೦) ಮರುಪಾವತಿ ಮಾಡುವದರ ಬಗ್ಗೆ ಹಾಗೂ ಭಾಗ ವಹಿಸುವದರ ಬಗ್ಗೆ ತೀರ್ಮಾಣ ಕೈಗೊಳ್ಳುವದು

೧೧) ಈ ತಿಂಗಳ ಕ್ರೀಯಾ ಯೋಜನೆ ಹಾಗೂ ಹಣಕಾಸಿನ ಅಗತ್ಯತೆಯ ಬಗ್ಗೆ ಮಾಹಿತಿ

೧೨) ಸಮಸ್ಯೆಗಳ ನಿವಾರಣಾ ಕಾರ್ಯ

೧೩) ಸಮುದಾಯದ ಸಮಸ್ಯೆಗಳ ಬಗ್ಗೆ ಚರ್ಚೆ ಮತ್ತು ತೀರ್ಮಾನ

೧೪) ಠರಾವುಗಳು

೧೫) ಹೊಸ ಸದಸ್ಯರ ಸೇರ್ಪಡೆ

೧೬) ಸರಳ ಸಭೆಗೆ ಒತ್ತು ನೀಡುವುದು ಮುಂತಾದವುಗಳು

❖ **ಸ್ತ್ರೀಶಕ್ತಿ ಸಂಘಗಳಲ್ಲಿ ಕಂಡುಬರುವ ಸಂಘರ್ಷದ ಮಾಹಿತಿ ಕೆಳಗಿನಂತಿವೆ**

- ಸಮಸ್ಯೆಯನ್ನು ಗುರುತಿಸುವದು ವಿಶ್ಲೇಷಣೆ ನಡೆಸುತ್ತಾ ಸಮಸ್ಯೆಯ ಸೃಷ್ಟಿ ಮೂಲ ಕಾರಣ ಕಂಡು ಹಿಡಿಯುವುದು
- ಸಮಸ್ಯೆಯ ಎಲ್ಲ ಆಯಾಮಗಳನ್ನು ಅರ್ಥೈಸಿಕೊಳ್ಳುವುದು ಮತ್ತು ಸಮಸ್ಯೆಯ ಹಂತಗಳನ್ನು ನೋಡುವುದು.
- ಪರಿಹಾರವನ್ನು ಕಂಡು ತಿಳಿಸುವುದು, ಪರಿಹಾರದ ಬೇರೆ ಬೇರೆ ವಿಧಾನಗಳನ್ನು ಕಂಡು ಹಿಡಿಯುವುದು
- ಪರಿಹಾರದ ಆಯ್ಕೆ ಮಾಡಿರುವುದು
- ಆಯ್ಕೆ ಮಾಡಿದ ಪರಿಹಾರದ ದಾರಿಯನ್ನು ತತಕ್ಷಣ ಅನುಷ್ಟಾನ ಮಾಡಬಾರದು
- ಫಲಿತಾಂಶದ ಮೌಲ್ಯಮಾಪನ ಮಾಡುವುದು

ಸಂಘರ್ಷ ನಿರ್ವಹಣೆ

ಗುಂಪಿನಲ್ಲಿ ಸಂಘರ್ಷ ಅನಿವಾರ್ಯ ಬೇರೆ ಬೇರೆ ಸನ್ನಿವೇಶ ಪರಿಸ್ಥಿತಿಯಲ್ಲಿರುವವರು ಅವರ ಆಶಯ ಭಿನ್ನವಾಗಿದೆ ಆದುದರಿಂದ ವ್ಯಕ್ತಿಗಳ ಬೇರೆ ಬೇರೆ ಆಶಯ ಅವಶ್ಯಕತೆ ನಿರೀಕ್ಷೆ ಮನೋಭಾವದಿಂದಾಗಿ ಸಂಘರ್ಷ ಉದ್ಭವಿಸುತ್ತದೆ.

ಸಂಘದಲ್ಲಿ ಇರುವ ಸದಸ್ಯರ ಮನೋಭಾವವು ಒಂದೇ ಆಗಿರುವುದಿಲ್ಲ, ಕುಟುಂಬದ ಸದಸ್ಯರ ಮನಸ್ಥಿತಿಯು ಒಂದೇ ಇರುವುದಿಲ್ಲ ಅಂದ ಮೇಲೆ ಸಂಘದಲ್ಲಿ ವಿವಿಧ ಮತ, ಧರ್ಮ, ಜಾತಿಯಿಂದ ಕೂಡಿದ ಸದಸ್ಯರ ಮನಸ್ಥಿತಿಯು ಒಂದೇಯಾಗಿರಲು ಹೇಗೆ ಸಾಧ್ಯ ಸಂಘವು ದೊಡ್ಡದಾಗಿ ಬೆಳೆದಾಗ ಮಾತ್ರ ಸಂಘರ್ಷವು ಉದ್ಭವಿಸುತ್ತದೆ ಏಕೆಂದರೆ ಹಣದ ಹರಿವು ಹೆಚ್ಚಾಗುತ್ತದೆ.

ಸಂಘರ್ಷವನ್ನು ಮೇಲ್ವಿಚಾರಕರು ನಿರ್ವಹಣೆ ಮಾಡುವ ಬಗ್ಗೆ

೧. ಸಂಘರ್ಷ ಪ್ರಾರಂಭ ಹಂತದಲ್ಲಿ ಕಾಣುವುದಿಲ್ಲ. ಗುಂಪಿನಲ್ಲಿ ಗುಂಪಾಗಿ ಹೊರ ಹೊಮ್ಮುತ್ತವೆ. ಎಲ್ಲಾ ಗುಂಪಿನಲ್ಲಿ ಸಂಘರ್ಷ ಬೆಂಬುವುದು ಕಂಡು ಬರುವುದು ಸಹಜವಾಗಿದೆ

೨. ಸಂಘರ್ಷ ಯಾವ ಕಾರಣಕ್ಕಾಗಿ ಹುಟ್ಟುತ್ತದೆ ಎಂಬ ಕಾರಣಗಳನ್ನು ಅರ್ಥೈಸಿಕೊಳ್ಳುವುದು.

೩. ಅಂತರ್ಯದಿಂದ ಉದ್ಭವಿಸುವ ಸಂಘರ್ಷ

೪. ವ್ಯಕ್ತಿ ವ್ಯಕ್ತಿಗಳ ಮದ್ಯೆ ಉದ್ಬವಿಸುವ ಸಂಘರ್ಷಗಳು ಕಾಣಬಹುದು.

೫. ನಂಬಿದ ಮೌಲ್ಯಗಳ ಆಧಾರದ ಮೇಲೆ ಸಂಘರ್ಷ ಉಂಟಾಗಬಹುದು.

೬. ಮಾಹಿತಿ ಅಂಕಿ ಅಂಶಗಳ ಕೊರತೆಯಿಂದ ಉಂಟಾದ ಸಂಘರ್ಷ ನಿವಾರಿಸಬಹುದು.

೭. ಗುಂಪಿನ ಗೊಂದಲ ಪಾತ್ರ ಹಂಚಿಕೆ ಸಂಯೋಜನೆ ಜವಾಬ್ದಾರಿ ವಿತರಣೆಯಿಂದ ಸಂಘರ್ಷ ನಿರ್ವಹಿಸಬಹುದು.

೮. ಮೌಲ್ಯ ವೈರುದ್ಯಗಳನ್ನು ಬಗೆಹರಿಸುವುದು ಕಷ್ಟ

೯. ಸಂಘರ್ಷ ನಿರ್ವಹಣೆ ಎಂಬುವದು ಪ್ರಕ್ರಿಯೆಯಾಗಿದೆ.

೧೦. ಸಂಘವು ದೊಡ್ಡದಾದಂತೇ ಹಣದ ಹರಿವು ಹೆಚ್ಚಾಗುವುವುದು, ಆವಾಗ ಸಂಘರ್ಷಗಳು ಹೆಚ್ಚಾಗಿ ಪ್ರಾರಂಭವಾಗುವುದು.

ಸಂಘರ್ಷದಿಂದಾಗಿ ಸಂಘದ ಸದಸ್ಯರು ಈ ಕೆಳಗಿನ ರೀತಿಯಲ್ಲಿ ಪ್ರತಿಕ್ರಿಯಿಸುತ್ತಾರೆ.:

೧. ಸ್ವಸಹಾಯ ಸಂಘರ್ಷವನ್ನು ತ್ಯಜಿಸುವುದು.

೨. ಸಂಘದ ಸಭೆಗಳಲ್ಲಿ ಪಾಲ್ಗೊಳ್ಳುವಿಕೆ

೩. ಇನ್ನೊಬ್ಬ ಸದಸ್ಯರನ್ನು ಬಲವಂತವಾಗಿ ಬಿಡುವಂತೆ ಒತ್ತಡ ಹೆರುವುದು.

೪. ಪ್ರತಿ ನಿಧಿಗಳ ವಿರುದ್ಧ ಅಥವಾ ಮೆಲ್ವಿಚಾರಕರ ವಿರುದ್ಧ ಹೆಚ್ಚಿನ ಚೌಕಾಸಿ ಮಾಡುವುದು.

೫. ಹಂತವಾಗಿ ಭಿನ್ನಾಭಿಪ್ರಾಯವನ್ನು ಹೊಂದಿರುತ್ತಾರೆ.

೬. ಮೇಲ್ವಿಚಾರಕರ ಮೇಲೆ ಅಥವಾ ಗುಂಪಿನ ಪ್ರತಿನಿಧಿಗಳ ಮೇಲೆ ಒತ್ತಡವನ್ನು ಹೇರುವುದು.

೭. ಕ್ಷುಲ್ಲಕ ಕಾರಣಕ್ಕಾಗಿ ಜಗಳಕ್ಕೆ ಇಳಿಯುವ ಪ್ರಕ್ರಿಯೆಯಲ್ಲಿ ತೊಡಗುವುದು.

೮. ಪರಸ್ಪರ ಅವರಲ್ಲಿಯೆ ವೈರತ್ವವನ್ನು ಸಾಧಿಸುವುದು.

೯. ಸಂಘದ ಲೆಕ್ಕಪತ್ರಗಳಲ್ಲಿ ದೋಷವಿದೆ ಎಂದು ಜಗಳವನ್ನು ಮಾಡುವುದು.

೧೦. ಸಂಘದ ಬಗ್ಗೆ ಕೆಟ್ಟದ್ದನ್ನು ಪ್ರಚಾರ ಮಾಡುವುದು.

೧೧. ಸಾಲವನ್ನು ತೆಗೆದುಕೊಂಡು ಸರಿಯಾದ ಕಂತುಗಳಲ್ಲಿ ಅವುಗಳನ್ನು ಕಟ್ಟದೇ ಇರುವುದು.

೧೨. ಸಂಘದ ಸದಸ್ಯರನ್ನು ತಪ್ಪು ದಾರಿಗೆ ಎಳೆಯುವುದು. ಸಂಘದ ಸದಸ್ಯರಲ್ಲಿ ಜಗಳ ಉಂಟಾಗುವಂತೆ ಮಾಡುವುದು.

೧೩. ಸಂಘದ ಸಭೆಯಲ್ಲಿ ಪಾಲ್ಗೊಳದಿದ್ದರೆ ದಂಡವನ್ನು ವಿಧಿಸುವ ಕ್ರಮವಿರುತ್ತದೆ.

ಸಂಘರ್ಷದಿಂದಾಗುವ ಉಪಯೋಗಗಳು:

೧. ಗುಂಪಿನಲ್ಲಿ ನಡೆದ ಸಮಸ್ಯೆಯನ್ನು ವಿವರಿಸುವದರೋಂದಿಗೆ ಗುಂಪನ್ನು ಸ್ವೀಕರಿಸುವುದು.

೨. ಸಮಸ್ಯೆಗೆ ಸಂಬಂಧಿಸಿದಂತೆ ಎಲ್ಲ ಸದಸ್ಯರಿಂದ ನಿವಾರಣಾ ಸಲಹೆಯನ್ನು ತಿಳಿದುಕೊಳ್ಳಬಹುದು.

೩. ಸಮಸ್ಯೆಯ ಮೂಲವನ್ನು ಹುಡುಕಿ ಸಮಸ್ಯೆಗೆ ಸೂಕ್ತವಾದ ಪರಿಹಾರವನ್ನು ನೀಡಿ ಮುಂದೆ ಆ ಸಮಸ್ಯೆಯು ಉದ್ಭವಿಸದಂತೆ ಎಚ್ಚೆತ್ತುಕೊಳ್ಳುವುದು.

೪. ಸಮಸ್ಯೆಯನ್ನು ನಿವಾರಣೆ ಮಾಡಲು ಕಠಿಣವಾದ ಸಂದರ್ಭದಲ್ಲಿ ಒಪ್ಪಂದಕ್ಕೆ ಬರುವುದು

೫. ಅನುಸರಿಕಾ ವಿಧಾನ ಮಾರ್ಗ ರೂಪಿಸುವುದು.

❖ **ಸ್ವ-ಸಹಾಯ ಗುಂಪಿನಲ್ಲಿ ಮೇಲ್ವಿಚಾರಕರ ಅಥವಾ ಪ್ರತಿನಿಧಿಗಳು ಹೊಂದಿದಂತಹ ಜವಾಬ್ದಾರಿಗಳು ಈ ಕೆಳಗಿನಂತಿವೆ.**

೧. ಕಾರ್ಯಕ್ರಮದ ಪರಿಣಾಮವನ್ನು ಮೂರು ನಾಲ್ಕು ತಿಂಗಳಿಗೊಮ್ಮೆ ಅಳೆಯುವುದು

೨. ಮೂರು ನಾಲ್ಕು ತಿಂಗಳಿಗೊಮ್ಮೆ ಸ್ವ-ಸಹಾಯ ಸಂಘರ್ಷದ ಪ್ರಗತಿ ವಿಗತಿಯ ಬಗ್ಗೆ ತಿಳಿದುಕೊಳ್ಳುವುದು.

೩. ಸಂಘದ ಪ್ರಗತಿಯ ಮಟ್ಟವನ್ನು ಅಳೆಯುವುದು.

೪. ಸಂಘದಲ್ಲಿಯ ಶಕ್ತಿ ದೌರ್ಬಲ್ಯ ಅವಕಾಶ ಬೆದರಿಕೆಗಳನ್ನು ಗುರುತಿಸುವುದು.

೫. ಸಂಘದಲ್ಲಿ ಖರ್ಚಿನ ಹೆಚ್ಚಳವನ್ನು ಅಥವಾ ಸಾಧನೆಯ ಕಡಿಮೆಯನ್ನು ಗುರುತಿಸುವುದು.

೬. ಇನ್ನೂ ಪರಿಣಾಮಕಾರಿಯಾದ ಕಾರ್ಯ ಮಾಡುವ ಜವಾಬ್ದಾರಿಯನ್ನು ಹೊಂದಿರುವುದು.

೭. ತಿದ್ದುಪಡೆಯ ಅಗತ್ಯವಿದ್ದಲ್ಲಿ ದಿಕ್ಕು ಬದಲಾಯಿಸುವದು.

೮. ಮೌಲ್ಯಮಾಪನವನ್ನು ಆಂತರಿಕ ಅಥವಾ ಬಾಹ್ಯ ವ್ಯಕ್ತಿಗಳಿಂದ ನಡೆಸುವುದು.

೯. ಮೌಲ್ಯ ಮಾಪನದ ಮಾಹಿತಿ ಪಡೆದು ತಪ್ಪಿದ ಕಾರ್ಯಕ್ರಮದಲ್ಲಿ ತಿದ್ದುಪಡೆಯನ್ನು ಸಮರ್ಪಕವಾದ ರೀತಿಯಲ್ಲಿ ಮಾಡುವುದು.

೧೦. ಜಾತಿ-ಮತ-ಪಂಥ ಬೇಧ, ಭಾವವನ್ನು ಮಾಡಬಾರದು.

೧೧. ಅನಕ್ಷರತೆಯನ್ನು ಹೊಂದಿರುವ ಮಹಿಳೆಯರಿಗೆ ಶಿಕ್ಷಣದ ಸೌಲಭ್ಯವನ್ನು ಒದಗಿಸಿಕೊಡುವುದು.

೧೨. ಸಂಘವು ಯಶಸ್ವಿಯಾಗಿ ಕಾರ್ಯನಿರ್ವಹಿಸಲು ಕಠಿಣ ಕ್ರಮಗಳನ್ನು ಕೈಗೊಳ್ಳುವುದು.

ಮಹಿಳೆಯರ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ದಿಯಲ್ಲಿ ಸ್ರೀ ಶಕ್ತಿ ಯೋಜನೆಯ ಪಾತ್ರ ಇಂತಿದೆ.

ಸ್ತ್ರೀ ಯರನ್ನು ಸಶಕ್ತರನ್ನಾಗಿಸಲು ರಾಜ್ಯಸರ್ಕಾರವು 'ಸ್ತ್ರೀ ಶಕ್ತಿಯೆಂಬ ಯೋಜನೆಯ ಮುಖಾಂತರವಾಗಿ ಗ್ರಾಮೀಣ ಪ್ರದೇಶಧ ಮಹಿಳೆಯರ ಸಾಮಾಜಿಕ, ಆರ್ಥಿಕ ಹಾಗೂ ಸರ್ವತೋಮುಖ ಆಭಿವೃದ್ಧಿಯನ್ನು ಸಾಧಿಸಲು ಗ್ರಾಮೀಣ ಸಮುದಾಯದ ಆರ್ಥಿಕವಾಗಿ ತೀರಾ ಹಿಂದುಳಿದ ೧೫ ರಿಂದ ೨೦ ಮಹಿಳೆಯರ ಗುಂಪಿನ ಮುಖಾಂತರವಾಗಿ ಗುಂಪಿನ ಜೊತೆಗೆ ಮಹಿಳೆಯರ ಆಭಿವೃದ್ದಿಯನ್ನು ಸಾಧಿಸುವ ಗುರಿಯನ್ನು ಹೊಂದಿ ಈ ಯೋಜನೆಯನ್ನು ಆರಂಭಿಸಲಾಯಿತು.

"ಸ್ತ್ರೀ ಶಕ್ತಿ" ಯೋಜನೆಯ ಮುಖಾಂತರವಾಗಿ ಹಲವಾರು ಮಹಿಳೆಯರು ಸ್ವಾವಲಂಬಿಗಳಾಗಿದ್ದಾರೆ. ಆರ್ಥಿಕವಾಗಿ ಸಬಲರಾಗಿದ್ದಾರೆ. ಸಾಮಾಜಿಕವಾಗಿ ಅಭಿವೃದ್ದಿಯನ್ನು ಸಾಧಿಸುತಿದ್ದಾರೆ. ಮಹಿಳೆಯರು ಸ್ತ್ರೀ ಶಕ್ತಿ ಸಂಘಗಳಿಂದ ಸ್ವ ಉದ್ಯೋಗವನ್ನು ಮಾಡಲು ಆರಂಭಿಸಿದ್ದಾರೆ. ಮಹಿಳೆಯರು ಸ್ತ್ರೀ ಶಕ್ತಿ ಯೋಜನೆಯಿಂದ ಪಡೆದುಕೊಂಡ ಪ್ರಯೋಜನದ ಅಂಶಗಳು ಇಂತಿವೆ.

ಗ್ರಾಮೀಣ ಪ್ರದೇಶದ ಮಹಿಳೆಯರು ಆಡು, ಕುರಿ, ಕೋಳಿ, ಎಮ್ಮೆ, ಜೇನು ಸಾಕಾಣಿಕೆ, ಅಂಗಡಿ, ಬಟ್ಟೆ ಹೊಲೆಯುವುದು, ಮೀನು ಸಾಕಾಣಿಕೆ, ಕಂಬಳಿ ತಯಾರಿಕೆ, ಪತರೊಳ್ಳಿ ತಯಾರಿಕೆ, ಇನ್ನು ಹತ್ತು ಹಲವು ಉದ್ಯೋಗಗಳನ್ನು ಮಾಡುತ್ತಿದ್ದಾರೆ. ಸಮಾಜದಲ್ಲಿ ನಡಯುವ ಸ್ಥಿತಿಗತಿಗಳ ಬಗ್ಗೆ ಯೋಚಿಸುತ್ತಿದ್ದಾರೆ. ಸಮಾಜದಲ್ಲಿ ಸ್ವಾವಲಂಬಿಯಾಗಿ ಬದುಕುತ್ತಿದ್ದಾರೆ ಎಂದೇ ಹೇಳಬಹುದು. ಗ್ರಾಮೀಣ ಪ್ರದೇಶದ ಮಹಿಳೆಯರು ತಮ್ಮದೇ ಆದ ಅಸ್ತಿತ್ವವನ್ನು ಪಡೆದುಕೊಂಡಿದ್ದಾರೆ.

ಪ್ರಯೋಜನೆಗಳು:

೧. ಬ್ಯಾಂಕುಗಳಲ್ಲಿ ವ್ಯವಹಾರಿಕ ಮಾಹಿತಿಯನ್ನು ಪಡೆದುಕೊಂಡಿದ್ದಾರೆ.

೨. ನಾಯಕತ್ವ ಗುಣಗಳ ಬೆಳವಣಿಗೆ.

೩. ಸ್ವಾವಲಂಬನೆ ಬದುಕು.

೪. ತಮ್ಮ ಬೇಡಿಕೆಗಳ ಈಡೇರಿಕೆ

೫. ಈ ಯೋಜನೆಯಿದಾಗಿ ಮಹಿಳೆ ಸಮಾಜದಲ್ಲಿ ಸಮಾನಳಾಗಿದ್ದಾಳೆ.

೬. ಉದ್ಯೋಗದಲ್ಲಿ ಮಹಿಳೆಯರ ಪ್ರಮಾಣ ಹೆಚ್ಚಳ

೭. ಮಹಿಳೆಯರ ಹಲವಾರು ಸಮಸ್ಯೆಗಳ ನಿವಾರಣೆ.

೮. ಮಹಿಳಾ ಅಭಿವೃದ್ದಿಯೊಂದಿಗೆ ಗ್ರಾಮೀಣ ಅಭಿವೃದ್ಧಿ

೯. ಲಿಂಗ ತಾರತಮ್ಯದಿಂದ ಮುಕ್ತಿ.

೧೦. ಗುಡಿ ಕೈಗಾರಿಕೆಗಳ ಅಭಿವೃದ್ದಿ.

೧೧. ಕುಟುಂಬದ ಆರ್ಥಿಕ ಸ್ಥಿತಿಯು ಉತ್ತಮವಾಗುವುದು.

೧೨. ಸ್ತ್ರೀ ಶಕ್ತಿ ಸಂಘದಿಂದ ಬಡತನ ನಿವಾರಣೆಗೆ ಉತ್ತಮ ಉದಾಹರಣೆಯಾಗಿದೆ.

೧೩. ಗ್ರಾಮೀಣ ಪ್ರದೇಶದ ಮಹಿಳೆಯರಿಗೆ ಸ್ತ್ರೀ ಶಕ್ತಿಯು ಒಂದು ವರದಾನವಾಗಿದೆ.

೧೪. ಗ್ರಾಮೀಣ ಪ್ರದೇಶದಲ್ಲಿನ ಮಹಿಳೆಯರ ಮೂಢ ನಂಬಿಕೆಗಳು ಮಾಯವಾಗಿವೆ.

ಆರ್ಥಿಕ ಅಭಿವೃದ್ಧಿಯಲ್ಲಿ ಸ್ತ್ರೀ ಶಕ್ತಿ ಯೋಜನೆಯ ಕುರಿತು ಒಂದು ಸಮಾಜ ಶಾಸ್ತ್ರೀಯ ಅಧ್ಯಯನವನ್ನು ಉಗಾರ ಖುರ್ದ ಗ್ರಾಮೀಣ ಸ್ತ್ರೀ ಶಕ್ತಿ ಸಂವಾದ ನಿಯಮಿತ ಉಗಾರ ಖುರ್ದದಲ್ಲಿ ಕೈಗೊಂಡು ಸ್ತ್ರೀಯರು ಸ್ವಾವಲಂಬನೆಯ ಜೀವನಕ್ಕೆ ಸ್ತ್ರೀ ಶಕ್ತಿ ಯೋಜನೆಯು ಒಂದು ವರದಾನವಾಗಿದೆ ಎಂದರೆ ತಪ್ಪಾಗಲಾರದು. ಉಗಾರ ಖುರ್ದದಲ್ಲಿ ೨೯ ಸ್ತ್ರೀ ಶಕ್ತಿ ಸಂಘಗಳು ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿವೆ. ಇದಕ್ಕೆ ಸೀಮಿತಗೊಳಿಸಿದಂತೆ ೨೦೧೧-೨೦೧೨ ರ ಒಂದು ಸಂಘದ ಉದಾಹರಣೆಯನ್ನು ನೀಡಲಾಗಿದೆ.

ಸ್ತ್ರೀ ಶಕ್ತಿ ಸಂಘದ ಹೆಸರು	: ಲಕ್ಷ್ಮೀ ಸ್ತ್ರೀ ಶಕ್ತಿ ಸಂಘ
ಸ್ಥಾಪನಾ ದಿನಾಂಕ	: ೫/೯/೨೦೧೧
ಸ್ಥಳ	: ಉಗಾರ ಖುರ್ದ
ವಾರದ ಸಭೆ	: ಪ್ರತಿವಾರ ಸೋಮವಾರ
ಉಳಿತಾಯ	: ಎಲ್ಲಾ ಸದಸ್ಯರು ತಲಾ ೨೦ ರೂ ತಪ್ಪದೇ
ಪ್ರತಿನಿಧಿ ೧	: ಮಂಗಲ ವಿಜಯ ಮಾಳಿ
ಪ್ರತಿನಿಧಿ ೨	: ಧನಶ್ರೀ ರಮೇಶ ನಾಯಿಕ

ಸಂಘದ ಸದಸ್ಯರ ವಿವರ:

೧. ಆಶಾಮನಿ ಕಾಶಿಮ ಸರಕವಾಸ

೨. ಮಂಗಲ ಮಹಾದೇವ ಮಿರ್ಜೆ

೩. ಸುಶೀಲಾ ಪರಶುರಾಮ ಹಟ್ಟಿ

೪. ಮಹಾದೇವಿ ಬಸಪ್ಪಾ ಹೂನಕನವರ

೫. ಶೋಭಾ ಶಾಂತಿನಾಥ ಕೋಥಳೆ

೬. ರೋಹಿನಿ ಚಂದ್ರಕಾಂತ ಜೋಶಿ

೭. ಸುನಂದಾ ದರೆಪ್ಪಾ ಕೋಥಳೆ

೮. ಚಂಪಾ ಭೂಪಾಲ ಕೋಥಳೆ

೯. ರೇಖಾ ರಮೇಶ ನಾಯಿಕ

೧೦. ಪದ್ಮಾವತಿ ಶ್ರೀಪಾಲ ಕೋಥಳೆ

೧೧. ರಾಣಿ ರಾಜ ಪೋತದಾರ

೧೨. ಅನೀತಾ ಸಂಜು ಲಾಂಡಗೆ

೧೩. ಪ್ರಿಯಾಂಕಾ ಸಂತೋಷ ಭಂಡಾರಿ

೧೪. ಮಾಲಮ್ಮಾ ಅಪ್ಪಾಸಾಹೆಬ ಭಂಡಾರಿ

೧೫. ಜಿನ್ನತ ಕಾಶಿಮ ಸರಕವಾಡಿ

೧೬. ರೀಹಾನಾ ಶಮಶುದ್ದಿನ ಸರಕವಾಡಿ

೧೭. ಇಂದುಬಾಯಿ ಭೂಪಾಲ ಸರಕವಾಡಿ

೧೮. ಮಂಗಲ ವಿಜಯ ಮಾಳಿ

೧೯. ಹಸೀನಾ ಅಮೀರಹಮನ ಪಟೇಲ

೨೦. ಧನಶ್ರೀ ರಮೇಶ ನಾಯಿಕ

ಬ್ಯಾಂಕುಗಳಲ್ಲಿ ವ್ಯವಹಾರ ಮಾಹಿತಿಯನ್ನು ಪಡೆದುಕೊಂಡಿದ್ದಾರೆ.

ಸ್ತ್ರೀ ಶಕ್ತಿ ಎಂಬ ಯೋಜನೆಗೂ ಮುನ್ನ ಗ್ರಾಮೀಣ ಪ್ರದೇಶದ ಮಹಿಳೆಯರು ಯಾವುದೇ ಬ್ಯಾಂಕುಗಳಲ್ಲಿ ಗಮನಿಸಿದರು. ಮಹಿಳೆಯರು ವ್ಯವಹರಿಸುವುದು ತುಂಬಾ ಕಡಿಮೆಯಾಗಿತ್ತು. ೨೦೦೦ ಇಸ್ವಿಯಿಂದ ಮಹಿಳೆಯರು ಬ್ಯಾಂಕುಗಳಲ್ಲಿ ನಿರ್ಭಯವಾಗಿ ಯಾವುದೇ ರೀತಿಯ ತೊಡಕುಗಳಿಲ್ಲದೆ ಅವರು ಸುಲಭವಾಗಿ ವ್ಯವಹರಿಸುತ್ತಿದ್ದಾರೆ.

ಇದಕ್ಕೆಲ್ಲಾ ಪ್ರಮುಖವಾದ ಕಾರಣವೇನೆಂದರೆ ಸ್ತ್ರೀ ಶಕ್ತಿ ಯೋಜನೆ ಎಂದು ಹೇಳಲಾಗುತ್ತದೆ. ಮಹಿಳೆಯರು ಯಾವ ರೀತಿಯಲ್ಲಿ ಹಣವನ್ನು ಉಳಿತಾಯವನ್ನು ಮಾಡಬಹುದು ಎಂಬುದರ ಬಗ್ಗೆ ಮಾಹಿತಿಯನ್ನು ಸ್ತ್ರೀ ಶಕ್ತಿ ಯೋಜನೆಯ ಮುಖಾಂತರ ತಿಳಿದುಕೊಂಡಿದ್ದಾರೆ. ಮಹಿಳೆಯರು ಬ್ಯಾಂಕುಗಳಲ್ಲಿ ಯಾರ ಸಹಾಯವಿಲ್ಲದೆ ಹಣವನ್ನು ಪಾವತಿಸುವ ಹಾಗೂ ಹಣವನ್ನು ಪಡೆದುಕೊಳ್ಳುವುದರ ಬಗ್ಗೆ ಮಾಹಿತಿಯನ್ನು ಪಡೆದುಕೊಂಡಿದ್ದಾರೆ.

ಆದರೂ ಸಹ ಬ್ಯಾಂಕುಗಳಲ್ಲಿ ಕೆಲವೊಮ್ಮೆ ಗುಂಪಿನ ಸದಸ್ಯರಿಗೆ ಸಹಕರಿಸುವುದಿಲ್ಲ. ಸ್ತ್ರೀ ಶಕ್ತಿ ಗುಂಪಿನವರು ಸೂಪರ್‌ವೈಸರ್ ಅಥವಾ ಮೇಲಧಿಕಾರಿಗಳನ್ನು ಕರೆದುಕೊಂಡು ಹೋಗಬೇಕಾಗುತ್ತದೆ. ಓದು ಬರಹ ಬಾರದ ಸ್ತ್ರೀ ಶಕ್ತಿ ಗುಂಪಿನ ಸದಸ್ಯರಿಗೆ ಅರ್ಜಿ ಅಥವಾ ಫಾರಂಗಳನ್ನು ತುಂಬಲು ಕಷ್ಟ ಆಗುತ್ತದೆ. ಹೀಗಾಗಿ ಅವರು ಅಂಗನವಾಡಿ ಕಾರ್ಯಕರ್ತೆಯರನ್ನು ವಿಧಿಯಿಲ್ಲದೆ ಅವಲಂಬಿಸಬೇಕಾಗುತ್ತದೆ.

ಮೇಲಿನ ಅಂಶಗಳನ್ನು ಗಮನಿಸಿದಾಗ ಮಹಿಳೆಯರ ಆರ್ಥಿಕ ಭದ್ರತೆ ಮತ್ತು ಸಬಲೀಕರಣಕ್ಕೆ ಈ ಸ್ತ್ರೀ ಶಕ್ತಿ ಯೋಜನೆಗಳು ಸಹಕಾರಿಯಾಗುತ್ತಿರುವುದು ಕಂಡು ಬರುತ್ತದೆ.

ಅಧ್ಯಾಯ – ನಾಲ್ಕು :

ಗುಂಪಿನ ಪ್ರತಿಯೊಬ್ಬ ಮಹಿಳೆಯರಲ್ಲಿ ನಾಯಕತ್ವದ ಗುಣಗಳನ್ನು ಸ್ತ್ರೀ–ಶಕ್ತಿ ಯೋಜನೆಯು ಬೆಳೆಸುವುದು

ಅಧ್ಯಾಯ – ನಾಲ್ಕು :

ಗುಂಪಿನ ಪ್ರತಿಯೊಬ್ಬ ಮಹಿಳೆಯರಲ್ಲಿ ನಾಯಕತ್ವದ ಗುಣಗಳನ್ನು ಸ್ತ್ರೀ-ಶಕ್ತಿ ಯೋಜನೆಯು ಬೆಳೆಸುವುದು

ಗುಂಪಿನ ಪ್ರತಿಯೊಬ್ಬ ಸದಸ್ಯರಿಗೂ ನಾಯಕತ್ವದ ಗುಣಗಳು ಬರುವಂತೆ ಈ ಯೋಜನೆ ಕಾರ್ಯನಿರ್ವಹಿಸುತ್ತದೆ. ಅದು ಹೇಗೆ ಎಂದರೆ ಪ್ರತಿಯೋಂದು ಸ್ತ್ರೀ ಶಕ್ತಿ ಸಂಘಗಳು ತಮ್ಮ ಸಂಘಕ್ಕೆ ೨ ಜನ ಪ್ರತಿನಿಧಿಗಳನ್ನು ಹೊಂದಿರುತ್ತಾರೆ. ಒಬ್ಬರು ಪ್ರತಿನಿದಿ, ಇನ್ನೊಬ್ಬರು ಉಪಪ್ರತಿನಿಧಿ ಇಬ್ಬರನ್ನು ಪ್ರತಿ ೧೨ ವಾರಗಳಿಗೋಮ್ಮೆ ಇಲ್ಲವೆ ೬ ತಿಂಗಳಿಗೊಮ್ಮೆ ಬದಲಾಯಿಸಲಾಗುತ್ತದೆ.

ಇದರಿಂದಾಗಿ ಸಂಘದಲ್ಲಿಯ ಪ್ರತಿಯೊಬ್ಬ ಮಹಿಳೆಯು ಸಹ ಗುಂಪಿನ ಪ್ರತಿನಿಧಿತ್ವ ಸ್ಥಾನವನ್ನು ಹೊಂದಿ ಸಂಘದ ಆರ್ಥಿಕ ಕಾರ್ಯಗಳನ್ನು ನೋಡಿಕೊಳ್ಳುವುದು ಸಂಘದ ಸದಸ್ಯರ ಸಮಸ್ಯೆಗೆ ಪರಿಹಾರದ ಕಾರ್ಯವನ್ನು ನಿರ್ವಹಿಸುತ್ತಾರೆ.

ಅಲ್ಲದೆ ತಮ್ಮ ಗುಂಪಿಗೆ ಬೇಕಾಗುವ ಸೌಲಭ್ಯಗಳನ್ನು ಗುಂಪಿನ ಎಲ್ಲಾ ಸದಸ್ಯರ ನಾಯಕತ್ವದಲ್ಲಿ ಬೇಡಿಕೆಯನ್ನು ಸರಕಾರಕ್ಕೆ ಸಲ್ಲಿಸುತ್ತಾರೆ. ಸ್ತ್ರೀ ಶಕ್ತಿ ಸಂಘವು ಸಹ ಅಪ್ರತ್ಯಕ್ಷವಾಗಿ ಮಹಿಳೆಯರಲ್ಲಿ ನಾಯಕತ್ವದ ಗುಣಗಳನ್ನು ಬೆಳೆಸುತ್ತದೆ.

ಪ್ರತಿ ವ್ಯಕ್ತಿ ಗುಂಪು ಸೇರುವಾಗ ಅವರಿಗೆ ಸದಸ್ಯತ್ವ ಸಂಖ್ಯೆ ನೀಡಬೇಕು. ಮೈರಾಡ ಸಂಘಗಳಲ್ಲಿ ಸದಸ್ಯರಾದ ಕ್ರಮಬದ್ಧತೆಯಂತಯೇ ಸದಸ್ಯತ್ವ ಸಂಖ್ಯೆಯನ್ನು ನೀಡುವ ಪದ್ಧತಿ ಇದೆ. ಗ್ರಾಮಗಳಲ್ಲಿ ಸಾಮಾನ್ಯವಾಗಿ ಒಂದೇ ಹೆಸರಿನ ಹಲವು ವ್ಯಕ್ತಿಗಳಿರುವುದರಿಂದ ಸದಸ್ಯತ್ವ

ಸಂಖ್ಯೆ ನೀಡುವುದು ಮುಖ್ಯವಾಗಿದೆ. ಈ ಪದ್ಧತಿಯು ಸದಸ್ಯರು ಸರತಿ ಪ್ರಕಾರ ಜವಾಬ್ದಾರಿ ವಹಿಸಿಕೊಳ್ಳಲೂ ಸಹ ಸಹಾಯಕವಾಗಿದೆ.

ಈ ಯೋಜನೆಯಿಂದ ಮಹಿಳೆಯರು ಅತ್ಯಧಿಕ ಪ್ರಮಾಣದಲ್ಲಿ ಸ್ವಾವಲಂಬಿಗಳಾಗಿ ಬದುಕುತ್ತಿದ್ದಾರೆ

"ಹನಿ ಹನಿ ಕುಡಿದರೆ ಹಳ್ಳ ತೆನೆ ತೆನೆ ಸೇರಿದರೆ ರಾಶಿ" ಎಂಬ ಗಾದೆಯಂತೆ ಮಹಿಳೆಯರು ತಮ್ಮ ಆದಾಯದಲ್ಲಿ ಬರುವಂತಹ ಅಲ್ಪ ಪ್ರಮಾಣದ ಹಣವನ್ನು ಸ್ತ್ರೀ ಶಕ್ತಿ ಸಂಘಗಳಲ್ಲಿ ಹೂಡುವುದರ ಮುಖಾಂತರವಾಗಿ ತಮ್ಮ ಹಣದ ಉಳಿತಾಯವನ್ನು ಮಾಡುತ್ತಾರೆ

ಹೀಗೆ ಉಳಿತಾಯವನ್ನು ಬಹು ದಿನಗಳವರೆಗೆ ಮಾಡಿ ವರ್ಷಕೊಮ್ಮೆ ಅಥವಾ ಕಷ್ಟ ಕಾಲದಲ್ಲಿ ಹೆಚ್ಚಿನ ಹಣವನ್ನು ಸ್ತ್ರೀ ಶಕ್ತಿ ಗುಂಪಿನಿಂದ ಪಡೆದು ತನ್ನ ಕಷ್ಟದ ಪರಿಸ್ಥಿತಿಯನ್ನು ಯಾವುದೇ ತೊಂದರೆ ಇಲ್ಲದೆ ನಿಭಾಯಿಸುತಿದ್ದಾರೆ. ಸ್ತ್ರೀ ಶಕ್ತಿ ಸಂಘಗಳಲ್ಲಿ ತಾವು ಹೂಡುವ ಹಣವನ್ನು ಮುಕ್ತವಾಗಿ ತೆಗೆದುಕೊಂಡು ತಮ್ಮ ಕಷ್ಟ ನಿವಾರಿಸಿಕೊಳ್ಳುವುದರಿಂದ ಮಹಿಳೆಯರು ಇನ್ನೊಬ್ಬರ ಹಣಕ್ಕಾಗಿ ಕೈಯನ್ನು ಒಡ್ಡದೆ ಸ್ವಾವಲಂಬಿಯಾಗಿ ಬದುಕುವುದನ್ನು ಸ್ತ್ರೀ ಶಕ್ತಿ ಯೋಜನೆಯ ಮುಖಾಂತರವಾಗಿ ಕಲಿತುಕೊಳ್ಳುತಿದ್ದಾರೆ ಎಂದು ಹೇಳಬಹುದು.

ಮಹಿಳೆ ಸ್ವತಂತ್ರ ಮತ್ತು ಸ್ವಾವಲಂಬಿ ಬದುಕನ್ನು ಸಾಗಿಸಲು ಆಕೆಗೆ ಅನೇಕ ಉಪಜೀವನದ ಮಾರ್ಗಗಳನ್ನು ಕಲ್ಪಿಸಿಕೊಡುವುದು. ಮಹಿಳೆಯರನ್ನು ಅಗರಬತ್ತಿ, ಮೇಣಬತ್ತಿ, ಬುಟ್ಟಿ ಕಸೂತಿ, ಸಿದ್ಧ ಉಡುಪುಗಳ ತಯಾರಿಕೆ, ಉಪ್ಪಿನಕಾಯಿ, ಸಾಂಬಾರ ಪದಾರ್ಥಗಳ ತಯಾರಿಕೆ ಮುಂತಾದ ವಿವಿಧ ಉದ್ಯೋಗಗಳಲ್ಲಿ ತರಬೇತಿ ನೀಡುವುದು.

ಸಂಘಟನೆಯ ಮೂಲಕ ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಂಡಿದ್ದಾರೆ

ಸ್ತ್ರೀ ಶಕ್ತಿ ಗುಂಪುಗಳು ಕೇವಲ ಆರ್ಥಿಕ ಅಂಶಗಳನ್ನು ಪೂರೈಸುತ್ತಿಲ್ಲ. ಅದರೊಂದಿಗೆ ಮಹಿಳೆಯರಲ್ಲಿ ಒಗ್ಗಟ್ಟನ್ನು ಮೂಡಿಸಿ ಅವರಿಗೆ ಕೊರತೆ ಇರುವ ಅಂಶಗಳನ್ನು ಸಂಘಟನೆಯ ಸಹಾಯದಿಂದ ಸ್ತ್ರೀ ಶಕ್ತಿ ಗುಂಪಿನ ಮುಖಾಂತರವಾಗಿ ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳುತ್ತಿದ್ದಾರೆ

ಅದು ಹೇಗೆಂದರೆ ಗುಂಪಿನ ಸದಸ್ಯರ ಒಗ್ಗಟ್ಟಿನ ಬಲದಿಂದಲೇ ತಮ್ಮ ಗುಂಪಿಗೆ ಸುತ್ತು ನಿಧಿಯನ್ನು ಪಡೆದುಕೊಳ್ಳುವುದು ಹಾಗೂ ಸರಕಾರದಿಂದ ಸ್ತ್ರೀ ಶಕ್ತಿ ಸಂಘಟನೆಗಳಿಗೆ ದೊರೆಯುವ ಸೌಲಭ್ಯಗಳನ್ನು ಸಮರ್ಪಕವಾಗಿ ಪಡೆದುಕೊಳ್ಳುವುದು. ಸ್ತ್ರೀ ಶಕ್ತಿ ಗುಂಪುಗಳು ಸಬ್ಸಿಡಿಗಳಲ್ಲಿ ಗಿರವಿ ಸಾಮಾನು ಪಡೆಯುವುದು, ಮೇಣದ ಬತ್ತಿ ತಯಾರಿಸುವ ಯಂತ್ರಗಳ ಸರಕಾರದಿಂದ ಗುಂಪಿನ ಪ್ರಯತ್ನದಿಂದಲೇ ಪಡೆಯುತ್ತಿದ್ದಾರೆ. ಇನ್ನೂ ಹಲವಾರು ಮಹಿಳೆಯರನ್ನು ಸ್ತ್ರೀ ಶಕ್ತಿ ಸಂಘಗಳಿಗೆ ಸೇರಲು ಸಲಹೆ ಸೂಚನೆಗಳನ್ನು ನೀಡುತ್ತಾರೆ.

ಸ್ತ್ರೀ ಶಕ್ತಿ ಯೋಜನೆಯು ಹೆಚ್ಚಾಗಿ ಗ್ರಾಮೀಣ ಪ್ರದೇಶದಲ್ಲಿ ಬಲಿಷ್ಠವಾಗಿರಬೇಕು ಅಂದಾಗ ಮಾತ್ರ ಸ್ತ್ರೀಯರ ಸಬಲೀಕರಣವು ಸಾಧ್ಯ. ಸ್ತ್ರೀ ಶಕ್ತಿ ಗುಂಪನ್ನು ಬಲಿಷ್ಠಗೊಳಿಸಿ ತಮ್ಮ ಇನ್ನಷ್ಟು ಬೇಡಿಕೆಗಳನ್ನು ಸರಕಾರದ ಮುಂದೆ ಇಡಲು ಸಾಧ್ಯವಾಗುವುದು. ಮಹಿಳೆಯರು ತಮಗೆ ಬೇಕಾದ ವಸ್ತುಗಳನ್ನು ಪಡೆಯಲು ಸಾಧ್ಯವಾಗುವುದು ಏಕೆಂದರೆ ತಾವೇ ಹಣವನ್ನು ಗಳಿಸುವುದರಿಂದ ಸ್ತ್ರೀ ಶಕ್ತಿ ಯೋಜನೆಯು ಕರ್ನಾಟಕದ ಮಹಿಳೆಯರಿಗೆ ವರದಾನವಾಗಿದೆ.

ಈ ಯೋಜನೆಯಿಂದಾಗಿ ಮಹಿಳೆ ಸಮಾಜದಲ್ಲಿ ಸಮಾನಳು ಎಂಬುದನ್ನು ಸಾಬೀತು ಪಡಿಸಿದ್ದಾಳೆ.

ಸ್ತ್ರೀ ಶಕ್ತಿ ಗುಂಪುಗಳು ಉಗಮಕ್ಕೂ ಮುನ್ನ ಸ್ತ್ರೀಯು ಸಮಾಳಳಾಗಬೇಕು ಎಂಬುವುದಕ್ಕೆ ಹಲವಾರು ಮಹಿಳೆಯರು ತುಂಬಾ ಕಠಿಣ ರೀತಿಯಲ್ಲಿ ಶ್ರಮ ವಹಿಸಿದ್ದಾರೆ. ಅಂದಿನ ದಿನಮಾನಗಳಲ್ಲಿ ಅವಳಿಗೆ ಬೆಂಬಲಿಸುವವರ ಸಂಖ್ಯೆ ಕಡಿಮೆ ಇತ್ತು. ಆದರೆ ಯಾವಾಗ ಸ್ತ್ರೀ ಶಕ್ತಿ ಯೋಜನೆ ಎಂಬುದು ಆರಂಭವಾಯಿತೋ ಅಂದಿನಿಂದ ಮಹಿಳೆಯರಿಗೆ ಹೆಚ್ಚಿನ ಬೆಂಬಲ ದೊರೆಯಲು ಪ್ರಾರಂಭವಾಗಿದ್ದನ್ನು ಕಾಣಬಹುದು.

ಅದು ಹೇಗೆಂದರೆ ಮಹಿಳೆಯರು ಸ್ತ್ರೀ ಶಕ್ತಿ ಗುಂಪುಗಳಲ್ಲಿ ಸೇರಿ ಒಗ್ಗಟ್ಟಾಗತೊಡಗಿದರು. ಅದು ಅಲ್ಲದೇ ಅವಳು ಆರ್ಥಿಕವಾಗಿ ಯಾರ ಅಧೀನಕ್ಕೆ ಒಳಪಡದೆ ಯಾವುದೇ ಕಷ್ಟದ ಪರಿಸ್ಥಿತಿಗಳನ್ನು ಎದುರಿಸಲು ಸ್ತ್ರೀ ಶಕ್ತಿ ಗುಂಪುಗಳ ಬೆಂಬಲ ದೊರೆಯಿತು. ಈ ಗುಂಪು ಶ್ರಮದ ಜೊತೆಗೆ ಮಹಿಳೆಯರ ಒಗ್ಗಟ್ಟಿನ ಮೂಲಕ ಮಹಿಳೆಯರು ಸಮಾನತೆಯನ್ನು ಕೇವಲ ಘೋಷಿಸುವುದಷ್ಟೆ ಅಲ್ಲ ಸಾಧಿಸಿದ್ದಾರೆ.

ಭಾರತೀಯ ಸಮಾಜವು ಪುರುಷ ಪ್ರಧಾನವಾದ ಸಮಾಜವಾಗಿದೆ. ಮಹಿಳೆಯರಿಗೆ ಯಾವುದೇ ರೀತಿಯ ಸ್ವಾತಂತ್ರವನ್ನು ನೀಡಿಲ್ಲ ಎನ್ನಬಹುದು. ಮನುಸ್ಮೃತಿಯಲ್ಲಿ 'ನ ಸ್ತ್ರೀ ಸ್ವಾತಂತ್ರಂ ಅರ್ಹತಿ' ಎಂದು ಹೇಳಿದ್ದಾನೆ. ಬಾಲ್ಯದಲ್ಲಿ ತಂದೆಯ ಆಶ್ರಯದಲ್ಲಿ ಯೌವನದಲ್ಲಿ ಗಂಡನ ಆಶ್ರಯದಲ್ಲಿ, ಮುಪ್ಪಿನಲ್ಲಿ ಮಗನ ಆಶ್ರಯದಲ್ಲಿ ಇರಬೇಕು. ಎಂದು ಹೇಳಿದ್ದಾನೆ.

ಉದ್ಯೋಗದಲ್ಲಿಯು ಸಹ ಮಹಿಳೆಯರಿಗೆ ಸ್ತ್ರೀ ಶಕ್ತಿ ಯೋಜನೆಯು ಸಹಾಯವನ್ನು ಮಾಡಿದೆ:

ಮಹಿಳೆಯರು ತಮ್ಮ ಕುಟುಂಬವನ್ನು ನಿರ್ವಹಣೆಯನ್ನು ಮಾಡುವುದರ ಜೊತೆ ಜೊತೆಗೆ ಬಿಡುವಿನ ಸಮಯದಲ್ಲಿ ಲಾಭದಾಯಕ ಉದ್ಯೋಗವನ್ನು ನಿರ್ವಹಿಸುತಿದ್ದಾರೆ. ಅದು ಹೇಗೆಂದರೆ

ಸರ್ಕಾರದ ವತಿಯಿಂದ ಕಡಿಮೆ ಹಣದಲ್ಲಿ ಬಟ್ಟೆ ಹೊಲೆಯುವ ಯಂತ್ರಗಳು, ಸಾಂವಿಗೆಯ ಮಶಿನಗಳು, ಗುಡಿ ಕೈಗಾರಿಕೆಗಳಿಗೆ ಸಂಬಂಧಿಸಿದ ಕೆಲವು ಉಪಕರಣಗಳನ್ನು ಸರಕಾರವು ಕಡಿಮೆ ಹಣದಲ್ಲಿ ಸ್ತ್ರೀ ಶಕ್ತಿ ಯೋಜನೆಯ ಅಡಿಯಲ್ಲಿ ಗ್ರಾಮೀಣ ಪ್ರದೇಶದ ಮಹಿಳೆಯರಿಗೆ ನೀಡಲಾಗುತ್ತದೆ. ಇವುಗಳ ಸಹಾಯದಿಂದ ಮಹಿಳೆಯು ತಾನು ಆರ್ಥಿಕವಾಗಿ ಲಾಭ ಪಡೆಯುತ್ತಿದ್ದಾಳೆ. ಉದ್ಯೋಗ ರಂಗದಲ್ಲಿ ಸಹ ಮಹಿಳೆಯರಿಗೆ ಸ್ತ್ರೀ ಶಕ್ತಿ ಯೋಜನೆಯು ಸಹಕಾರಿಯಾಗಿದೆಯೆಂದು ಹೇಳಬಹುದು.

ಗ್ರಾಮೀಣ ಪ್ರದೇಶದಲ್ಲಿ ಮಹಿಳೆಯರು ಅಶಿಕ್ಷಿತರಾಗಿದ್ದಾರೆ. ಹಳ್ಳಿಯಲ್ಲಿ ಸಾಗುವ ಸಂಪನ್ಮೂಲಗಳಿಂದಾಗಿ ಅವರು ಉದ್ಯೋಗವನ್ನು ಮಾಡುವುದು ಅನಿವಾರ್ಯವಾಗಿದೆ. ಪಾಶ್ಚಾತೀಕರಣದ ಪ್ರಭಾವದಿಂದಾಗಿ ಗುಡಿ ಕೈಗಾರಿಕೆಗಳು ಹಲವಾರು ತೊಂದರೆಗಳನ್ನು ಅನುಭವಿಸಿದವು ಆದರೆ ಕರ್ನಾಟಕ ಸರಕಾರವು ಸ್ತ್ರೀ ಶಕ್ತಿ ಯೋಜನೆಯ ಮುಖಾಂತರ ಹಲವಾರು ತರಬೇತಿಗಳನ್ನು ಕೈಗೊಳ್ಳಲು ಅವಕಾಶಗಳನ್ನು ಕಲ್ಪಿಸಿಕೊಡಲಾಯಿತು. ಗುಡಿ ಕೈಗಾರಿಕೆಗಳಲ್ಲಿ ತಯಾರಿಸುವ ವಸ್ತುಗಳಿಗೆ ಮಾರುಕಟ್ಟೆಯ ಸೌಲಭ್ಯಗಳನ್ನು ಒದಗಿಸಿಕೊಡಲಾಯಿತು.

ಮಹಿಳೆಯರ ಹಲವಾರು ಸಮಸ್ಯೆಗಳನ್ನು ಈಡೇರಿಸುವಲ್ಲಿ ಸ್ತ್ರೀ ಶಕ್ತಿ ಯೋಜನೆಯು ಆಧಾರವಾಗಿದೆ.

ಮದ್ಯ ಕಾಲದಿಂದಲೂ ಆದುನಿಕ ಕಾಲದವರೆಗು ಮಹಿಳೆಯರು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಾ ಬಂದಿದ್ದಾರೆ. ಅವುಗಳೆಂದರೆ ಪರಾವಲಂನೆಯ ಸಮಸ್ಯೆ, ಲಿಂಗತಾರತಮ್ಯದ ಸಮಸ್ಯೆ, ವರದಕ್ಷಣೆಯ ಸಮಸ್ಯೆ, ಕೌಟುಂಬಿಕ ಹಿಂಸೆ, ಪರಾಪದ್ಧತಿ, ದೇವದಾಸಿ ಪದ್ಧತಿ ಹೀಗೆ ಹತ್ತು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಾ ಬಂದಿದ್ದಾರೆ. ಇಂತಹ ಸಾಮಾಜಿಕ ಸಮಸ್ಯೆಗಳನ್ನು ಹತ್ತಿಕ್ಕಲು ಸ್ತ್ರೀ ಶಕ್ತಿ ಗುಂಪಿನ ಮುಖಾಂತರವಾಗಿ ಹಲವಾರು

ಸಮಸ್ಯೆಗಳನ್ನು ಮೆಟ್ಟಿ ನಿಂತಿದ್ದಾರೆ. ಮಹಿಳೆಯರು ಆರ್ಥಿಕ ಪರಾವಲಂಬನೆಯ ಸಮಸ್ಯೆಯನ್ನು ಹೋಗಲಾಡಿಸುವಲ್ಲಿ ಸ್ತ್ರೀ ಶಕ್ತಿ ಯೋಜನೆ ಪ್ರಮುಖ ಪಾತ್ರ ವಹಿಸಿದೆ. ಅದು ಹೇಗೆಂದರೆ ತಮ್ಮ ಆದಾಯದಲ್ಲಿ ಅಲ್ಪ ಪ್ರಮಾಣದ ಹಣವನ್ನು ಉಳಿತಾಯ ಮಾಡಿ ತಮ್ಮ ಕಷ್ಟಗಳನ್ನು ಎದುರಿಸಿ ಸ್ವಾವಲಂಬಿಯಾಗಿ ಬದುಕುತಿದ್ದಾರೆ. ಇದರಿಂದಾಗಿ ಮಹಿಳೆಯರು ಸಮಸ್ಯೆಯನ್ನು ಎದುರಿಸುವಲ್ಲಿ ಸ್ತ್ರೀ ಶಕ್ತಿ ಯೋಜನೆ ಆಧಾರವಾಗಿದೆ ಎಂದು ಹೇಳಬಹುದು.

ಆದರೂ ಸಹ ಗ್ರಾಮೀಣ ಮಹಿಳೆಯರು ಸ್ತ್ರೀ ಶಕ್ತಿ ಗುಂಪಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಭಾಗವಹಿಸಬೇಕೆಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಯ ಇನ್ನಷ್ಟು ಶ್ರಮ ವಹಿಸಬೇಕಾಗಿದೆ. ಅಂಗನವಾಡಿ ಕಾರ್ಯಕರ್ತೆಯರು ಸ್ತ್ರೀ ಶಕ್ತಿ ಗುಂಪಿನಿಂದ ಆಗುವ ಪ್ರಯೋಜನಗಳನ್ನು ಗ್ರಾಮೀಣ ಮಹಿಳೆಯರ ಸಬಲೀಕರಣವು ಸಾಧನವಾಗುವುದು. ಗ್ರಾಮ ಮತ್ತು ನಗರ ಪ್ರದೇಶದ ಮಹಿಳೆಯರ ಮನೋಭಾವನೆಯಲ್ಲಿ ವ್ಯತ್ಯಾಸವನ್ನು ಕಾಣಬಹುದು. ನಗರ ಪ್ರದೇಶದ ಮಹಿಳೆಯರು ಬೇಗನೆ ತಿಳಿದುಕೊಳ್ಳುತ್ತಾರೆ. ಆದರೆ ಗ್ರಾಮೀಣ ಪ್ರದೇಶದ ಮಹಿಳೆಯರಿಗೆ ತಿಳಿಸುವುದು ಬಹಳ ಕಠಿಣವಾಗಿದೆ

ಅಧ್ಯಾಯ – ಐದು :

ಮಹಿಳೆಯರ ಅಭಿವೃದ್ಧಿಯೊಂದಿಗೆ ಗ್ರಾಮೀಣ ಪ್ರದೇಶದ ಅಭಿವೃದ್ದಿಯಲ್ಲಿ ಸ್ತ್ರೀ ಶಕ್ತಿ ಗುಂಪುಗಳ ಪಾತ್ರ ಪ್ರಮುಖ್ಯವಾಗಿದೆ.

ಅಧ್ಯಾಯ – ಐದು :

ಮಹಿಳೆಯರ ಅಭಿವೃದ್ಧಿಯೊಂದಿಗೆ ಗ್ರಾಮೀಣ ಪ್ರದೇಶದ ಅಭಿವೃದ್ದಿಯಲ್ಲಿ ಸ್ತ್ರೀ ಶಕ್ತಿ ಗುಂಪುಗಳ ಪಾತ್ರ ಪ್ರಮುಖ್ಯವಾಗಿದೆ.

ಗ್ರಾಮೀಣ ಪ್ರದೇಶದಲ್ಲಿಯ ಮಹಿಳೆಯರು ಆರ್ಥಿಕ ವ್ಯವಹಾರಗಳಲ್ಲಿ ಪಾಲ್ಗೊಳ್ಳುವುದರಿಂದ ಹೆಚ್ಚಿನ ಸಮಾನತೆ ಪಡೆದುಕೊಂಡಿದ್ದಾರೆ. ಹೀಗಾಗಿ ಗ್ರಾಮೀಣ ಮಟ್ಟದಲ್ಲಿ ಮಹಿಳೆಯರು ತಮಗೆ ಆಗುವಂತಹ ಸಮಸ್ಯೆಗಳ ವಿರುದ್ದ ಸ್ತ್ರೀ ಶಕ್ತಿ ಗುಂಪುಗಳ ಮುಖಾಂತರವಾಗಿ ತಮ್ಮ ಸಮಸ್ಯೆಯಿಂದ ಪಾರಾಗುತ್ತಾರೆ. ಅದು ಅಲ್ಲದೆ ಸಮಾಜದಲ್ಲಿಯ ಮೂಢನಂಬಿಕೆಯಿಂದ ತೊಡೆದು ಹಾಕಲು ತಿಳುವಳಿಕೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾರೆ.

ಗ್ರಾಮೀಣ ಪ್ರದೇಶದಲ್ಲಿ ನಡೆಯುವ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ತಮ್ಮ ಜನರಿಗೆ ತಿಳುವಳಿಕೆಯನ್ನು ನೀಡುತ್ತಿದ್ದಾರೆ. ಹೀಗಾಗಿ "ಸ್ತ್ರೀ ಶಕ್ತಿ" ಸಂಘಗಳು ತಮ್ಮ ಅಭಿವೃದ್ಧಿಯೊಂದಿಗೆ ಗ್ರಾಮೀಣ ಅಭಿವೃದ್ದಿಯನ್ನು ಸಾಧಿಸುತ್ತಿದೆ.

ನಮ್ಮ ದೇಶವನ್ನು ' ಹಳ್ಳಿಗಳ ನಾಡು ಹಾಗೂ ಒಕ್ಕಲಿಗರ ಬೀಡು' ಎಂದು ಕರೆಯಲಾಗುತ್ತದೆ. ಬಹುಸಂಖ್ಯಾತ ಭಾರತೀಯರು ಗ್ರಾಮೀಣ ಸಮುದಾಯಗಳಲ್ಲಿ ನೆಲೆಸಿರುತ್ತಾರೆ. ಗ್ರಾಮೀಣ ಸಮುದಾಯಗಳ ಸರ್ವಾಂಗೀಣ ಪ್ರಗತಿಗಾಗಿ ಎಂದಿನಿಂದಲೂ ಪ್ರಯತ್ನಗಳು

ಮುಂದುವರೆದುಕೊಂಡು ಬಂದಿರುತ್ತದೆ. ಹಳ್ಳಿಗಳ ಏಳ್ಗೆಯಾಗದೆ ದೇಶದ ಏಳ್ಗೆ ಅಸಾಧ್ಯ ಎಂದು ಮಹಾತ್ಮ ಗಾಂಧೀಜಿಯವರು ಬಲವಾಗಿ ನಂಬಿದವರು.

ಗ್ರಾಮೀಣ ಸಮುದಾಯಗಳಲ್ಲಿ ವಿವಿಧ ರೀತಿಯ ಸಮಸ್ಯೆಗಳು ಗೋಚರಿಸುತ್ತವೆ. ಬಡತನ, ಬಿಕ್ಷಾಟನೆ, ನಿರುದ್ಯೋಗ, ವೇಶ್ಯಾವಾಟಿಕೆ, ಅನಕ್ಷರತೆ ಮುಂತಾದ ಸಮಸ್ಯೆಗಳನ್ನು ನಿವಾರಣೆ ಮಾಡಿ ಗ್ರಾಮೀಣ ಜನರ ಬದುಕನ್ನು ಹಸನಗೊಳಿಸುವ ಅವರು ಸಂತೃಪ್ತ ಜೀವನ ಸಾಗಿಸುವಂತೆ ಮಾಡುವ ಪ್ರಯತ್ನವೇ ಗ್ರಾಮೀಣ ಅಭಿವೃದ್ಧಿಯಾಗಿದೆ.

ಸ್ತ್ರೀ ಶಕ್ತಿ ಯೋಜನೆಯಿಂದಾಗಿ ಮಹಿಳೆಯರು ಲಿಂಗ ತಾರತಮ್ಯದಿಂದ ಮುಕ್ತಿಯನ್ನು ಹೊಂದುತ್ತಿದ್ದಾರೆ.

ಸ್ತ್ರೀ ಶಕ್ತಿ ಯೋಜನೆಯು ಮುಖಾಂತರವಾಗಿ ಮಹಿಳೆಯರು ಎಲ್ಲಾ ರಂಗದಲ್ಲಿ ಕಾಣಿಸಿಕೊಳ್ಳುತಿದ್ದಾರೆ. ಮೊದಲು ಮಹಿಳೆಯರು ಒಂಟಿಯಾಗಿ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ. ಈಗ ಪುರುಷ ಸಮಾಜದಲ್ಲಿ ಸಮಾನತೆಯ ಕಾನೂನನ್ನು ರೂಪಿಸಲಾಗಿದೆ.

ಯಾವಾಗ ಸ್ತ್ರೀ ಶಕ್ತಿ ಎಂಬ ಯೋಜನೆಯು ಜಾರಿಗೆ ಬಂದ ನಂತರ ಮಹಿಳೆಯರು ತಮ್ಮ ಸ್ತ್ರೀ ಶಕ್ತಿ ಸಂಘದ ಸಹಾಯದಿಂದ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ. ಇದರಿಂದಾಗಿ ಅವರು ಲಿಂಗ ತಾರ್ಯತಮ್ಯವೆಂಬ ಸಮಸ್ಯೆಯನ್ನು ಎದುರಿಸಿ ತಮ್ಮ ಗ್ರಾಮದ ಎಲ್ಲ ಕಾರ್ಯಗಳಲ್ಲಿ ಪಾಲ್ಗೊಳ್ಳುತ್ತಿದ್ದಾರೆ.

ಸ್ತ್ರೀ ಶಕ್ತಿಯೋಜನ ಯ ಮುಖಾಂತರ ಗುಡಿ ಕೈಗಾರಿಕೆಗಳು ಅಭಿವೃದ್ದಿಯಾಗಿದೆ.

ಸ್ತ್ರೀ ಶಕ್ತಿ ಗುಂಪುಗಳಿಂದಾಗಿ ಗುಡಿ ಕೈಗಾರಿಕೆಗಳಿಗೆ ಹೆಚ್ಚಿನ ಪುಷ್ಟಿಯನ್ನು ನೀಡಲಾಗುತ್ತದೆ. ಅದು ಹೇಗೆಂದರೆ ಮಹಿಳೆಯರಿಗೆ ಸರಕಾರದಿಂದ ಕಡಿಮೆ ಬಡ್ಡಿ ದರದಲ್ಲಿ ಸಾಲ ಸೌಲಭ್ಯ

ದೊರೆಯುತ್ತಿದೆ. ಇದರಿಂದಾಗಿ ಮಹಿಳೆಯರು ಆ ಹಣದ ಸಹಾಯದ ಮುಖಾಂತರವಾಗಿ ಅವರು ಚಿಕ್ಕ ಚಿಕ್ಕ ಗುಂಪುಗಳಲ್ಲಿಯೆ ಉದಬತ್ತಿ ತಯಾರಿಕೆ, ಮೇಣದ ಬತ್ತಿ ತಯಾರಿಕೆ,ಬಿಡಿ ತಯಾರಿಕೆ, ಬಟ್ಟೆಗಳನ್ನು ಹೊಲೆಯುವುದು,ಕೈಚೀಲಗಳನ್ನು ತಯಾರಿಸುವುದು, ಸಜ್ಜಿ ರೊಟ್ಟಿಗಳನ್ನು ತಯಾರಿಸುವುದು, ಉಪ್ಪಿನಕಾಯಿಗಳನ್ನು ತಯಾರಿಸುವುದು ಇತ್ಯಾದಿ.

ಗುಡಿ ಕೈಗಾರಿಕೆಗಳ ಅಭಿವೃದ್ದಿಗೆ ಸಹಾಯಕವಾಗಿದೆ.

ಆದಾಯ ಉತ್ಪನ್ನ ಚಟುವಟಿಕೆಗಳು:~

ಸ್ತ್ರೀ ಶಕ್ತಿ ಗುಂಪಿನ ಸದಸ್ಯರು ಆದಾಯ ಉತ್ಪನ್ನ ಚಟುವಟಿಕೆ ಕೈಗೊಳ್ಳುವ ಸಲುವಾಗಿ ಅವರಿಗೆ ಕೌಶಲ್ಯ ಅಭಿವೃದ್ದಿ ತರಬೇತಿಗಳನ್ನು ನುರಿತ ಸಂಪನ್ಮೂಲ ವ್ಯಕ್ತಿಗಳಿಂದ "ಎಟಿಡಿಸಿ, ವೆಬಿಸಿಟಿ" ಮತ್ತು "ಮೈರಾಡ" ಸಂಸ್ಥೆಗಳ ಮೂಲಕ ತರಬೇತಿ ನಿಡಲಾಗುತ್ತದೆ. ಉದಾ:~ ಕ್ರಿಸ್ ಡಿಸೈನಿಂಗ್, ಆಹಾರ ಸಂಸ್ಕರಣೆ, ಕೃತಕ ಆಭರಣ ತಯಾರಿಕೆ, ಹಸು/ಕೋಳಿ ಸಾಕಾಣಿಕೆ, ಗೊಂಬೆ ತಯಾರಿಕೆ, ಬೇಕರಿ ಉತ್ಪನ್ನಗಳ ತಯಾರಿಕೆ, ಬಾಳೆನಾರು/ಬಿದಿರು ಉತ್ಪನ್ನಗಳಿಂದ ತಯಾರಿಸಿದ ವಸ್ತುಗಳು ಹೊಲಿಗೆ ತರಬೇತಿ, ಸಾಬೂನು ಅಗರಬತ್ತಿ, ಸಾಂಬರ್ ಪದಾರ್ಥಗಳ ತಯಾರಿಕೆ ಇನ್ನೂ ಮುಂತಾದ ಉದ್ಯೋಗಗಳಲ್ಲಿ ತರಬೇತಿಯನ್ನು ನೀಡಲಾಗುತ್ತದೆ.

ಮಾರುಕಟ್ಟೆ ಮಳಿಗೆಗಳ ನಿರ್ಮಾಣ:

ಸ್ತ್ರೀ ಶಕ್ತಿ ಗುಂಪುಗಳ ಉತ್ಪನ್ನಗಳಿಗೆ ಮಾರುಕಟ್ಟೆ ಸೌಲಭ್ಯ ಒದಗಿಸಲು ಪ್ರತಿ ಜಿಲ್ಲೆ ಹಾಗೂ ತಾಲೂಕಿಗೆ ಒಂದರಂತೆ ಮಾರುಕಟ್ಟೆ ಮಳಿಗೆಗಳ ನಿರ್ಮಾಣ ಮಾಡಲಾಗುವುದು. "ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣ ಅಬಿವೃದ್ದಿ ಯೋಜನೆ"ಗೆ ಸೇರಿದ "ಸಿರಿ" ಎಂಬ ಗ್ರಾಮೋದ್ಯೋಗ ಸಂಸ್ಥೆ

ಗ್ರಾಮೀಣ ಮಹಿಳೆಯರಿಗೆ ಆರ್ಥಿಕ ಮೌಲ್ಯವುಳ್ಳ ವಸ್ತುಗಳನ್ನು ಉತ್ಪಾದಿಸಲು ಮತ್ತು ಯೋಗ್ಯ ಬೆಲೆಗೆ ಮಾರಾಟ ಮಾಡಲು ಸೂಕ್ತ ಅವಕಾಶಗಳನ್ನು ಕಲ್ಪಿಸುವುದು.

ಸುತ್ತು ನಿಧಿ:

ಸ್ತ್ರೀ ಶಕ್ತಿ ಸಂಘದಲ್ಲಿ ಸಹಕಾರವು ಸುತ್ತು ನಿಧಿಯನ್ನು ಒದಗಿಸುವ ವ್ಯವಸ್ಥೆ ಮಾಡಿದೆ. ಇಲಾಖೆ(ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ) ವತಿಯಿಂದ ಎಲ್ಲಾ ಗುಂಪುಗಳಿಗೆ ಸುತ್ತು ನಿಧಿ ೫೦೦೦ ರೂ. ಗಳನ್ನು ನೀಡಲಾಗಿದೆ.

ಶೇ.೬ರ ಬಡ್ಡಿ ಸಹಾಯಧನ:

ಸ್ತ್ರೀ ಶಕ್ತಿ ಸಂಘಗಳು ಆದಾಯ ಉತ್ಪನ್ನ ಚಟುವಟಿಕೆಗೆ ಹಮ್ಮಿಕೊಳ್ಳುವ ಸಲುವಾಗಿ ರಾಷ್ಟ್ರೀಕೃತ ಹಾಗೂ ಸಹಕಾರ ಬ್ಯಾಂಕಿನಿಂದ ಸಾಲ ಪಡೆದ ಸಂದರ್ಭದಲ್ಲಿ ೫೦.೦೦೦- ೧.೦೦.೦೦೦ ವರೆಗೂ ಇಲಾಖೆಯಿಂದ ಸಹಾಯ ಧನದ ರೂಪದಲ್ಲಿ ಶೇ. ೬ ರ ಬಡ್ಡಿ ದರವನ್ನು ನೀಡುವುದು.

ಪರಿಶಿಷ್ಟ ಜಾತಿ ಮತ್ತು ಜನಾಂಗಗಳಿಗೆ ವಿಶೇಷ ಪ್ರಮುಖತೆ ನೀಡಲಾಗುತ್ತದೆ.

ಸರ್ಕಾರವು ಸ್ತ್ರೀ ಶಕ್ತಿ ಸಂಘದಲ್ಲಿ ಪರಿಶಿಷ್ಟ್ಯ ಜಾತಿ ಮತ್ತು ಪರಿಶಿಷ್ಟ್ಯ ಪಂಗಡ ಮಹಿಳೆಯರು ಕಡ್ಡಾಯವಾಗಿ ಇರಲೇಬೇಕು. ಇತರ ಜಾತಿಯ ಮಹಿಳೆಯರು ತಾರತಮ್ಯ ಮಾಡಬಾರದು. ತಾರತಮ್ಯ ಮಾಡಿದ್ದು ಕಂಡು ಬಂದರೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಂಘದ ಸದಸ್ಯತ್ವವನ್ನು ರದ್ದುಗೊಳಿಸುತ್ತದೆ.

ಸ್ತ್ರೀ ಶಕ್ತಿ ಗುಂಪಿನಲ್ಲಿ ಬ್ಯಾಂಕ್ ಸಾಲ ಕೊಳ್ಳಲು ಗುಂಪಿನ ಅರ್ಹತೆ ಹೀಗಿರುತ್ತದೆ.

ಸ್ತ್ರೀ ಶಕ್ತಿ ಗುಂಪಿನ ತಮ್ಮದೇ ಆದ ಬಂಡವಾಳದಿಂದ ಎಲ್ಲಾ ಸದಸ್ಯರ ಸಾಲದ ಅವಶ್ಯಕತೆಯನ್ನು ಪೂರೈಸಲು ಸಾಧ್ಯವಾಗದ ಕಾರಣ ಇತರ ಸಂಸ್ಥೆಗಳಿಂದ ಸಾಲ ತೆಗೆದುಕೊಳ್ಳಬೇಕಾಗುತ್ತದೆ. ಭಾರತದಲ್ಲಿ ಒಳ್ಳೆಯ ಸ್ವ- ಸಹಾಯ ಗುಂಪುಗಳಿಗೆ ಬ್ಯಾಂಕಿನಿಂದ ಸಾಲ ಪಡೆಯಲು ಅವಕಾಶವಿದೆ. ಬ್ಯಾಂಕಿನ ಸಾಲವನ್ನು ಗುಂಪಿನ ಸದಸ್ಯರು ತಮ್ಮ ವೈಯಕ್ತಿಕ ಹಣದ ಬೇಡಿಕೆಗಳಿಗೆ ಉಪಯೋಗಿಸಿ ಬ್ಯಾಂಕಿಗೆ ಒಪ್ಪಿಗೆ ಹಾಕಿ ಮರುಪಾವತಿ ಮಾಡಬೇಕು. ಬ್ಯಾಂಕ್ ಸಾಲವು ಗುಂಪಿಗೆ ಹಣ ಕೊಡುವುದೇ ಹೊರೆತು ವೈಯಕ್ತಿಕ ಸದಸ್ಯರಿಗಲ್ಲ. ಅದರ ಮರುಪಾವತಿ ಗುಂಪಿನ ಎಲ್ಲ ಸದಸ್ಯರ ಜವಾಬ್ದಾರಿಯಾಗಿರುತ್ತದೆ.

- ಗುಂಪು ಕನಿಷ್ಠ ಆರು ತಿಂಗಳ ಕಾಲ ಸಕ್ರಿಯವಾಗಿ ಕಾರ್ಯನಿರ್ವಹಿಸಿರಬೇಕು.
- ಗುಂಪಿನದೇ ಆದ ಸ್ವಂತ ಬಂಡವಾಳದಿಂದ ನಿರಂತರ ಉಳಿತಾಯ ಹಾಗೂ ಸಾಲ ನಿರ್ವಹಣೆ ಮಾಡಬೇಕು.
- ಗುಂಪಿನ ಆಂತರಿಕ ಸಾಲದಲ್ಲಿ ಕನಿಷ್ಠ ೯೫% ಸರಿಯಾದ ಸಮಯಕ್ಕೆ ಮರುಪಾವತಿಯಾಗುತ್ತಿರಬೇಕು.
- ಗುಂಪು ಇತರ ಸಂಸ್ಥೆಗಳಿಂದ ತೆಗೆದುಕೊಂಡಿರುವ ಸಾಲಗಳನ್ನು ಕಟ್ಟಿ ತೀರಿಸಬೇಕು.
- ಗುಂಪಿನಲ್ಲಿ ಒಮ್ಮತದಿಂದ ಕಾರ್ಯಚಾಲನೆ ಆಗುತ್ತಿರಬೇಕು. ಹಲವರ ದಬ್ಬಾಳಿಕೆ ಇರಬಾರದು. ಅಲ್ಲದೇ ಗುಂಪಿನಿಂದ ಕೊಟ್ಟಿರುವ ಸಾಲಗಳು ಕೆಲವರಿಗೆ ಮಾತ್ರ ಸಿಗದೇ ಎಲ್ಲರಿಗೂ ಸಿಗುತ್ತಿರಬೇಕು.
- ಗುಂಪಿನ ಸಭೆಗಳು ಸರಿಯಾದ ರೀತಿಯಲ್ಲಿ ನಡೆಯುತ್ತಿದ್ದು ಸದಸ್ಯರ ಹಾಜರಾತಿ ೮೦% ಆದರೂ ಇರಬೇಕು.

- ಗುಂಪಿನ ಲೆಕ್ಕ ಪುಸ್ತಕಗಳು ಸರಿಯಾಗಿ ಸಂಪೂರ್ಣವಾಗಿ ಬರೆದಿರಬೇಕು. ಸಾಧ್ಯವಾದಲ್ಲಿ ಗುಂಪಿನ ಲೆಕ್ಕ ಪರಿಶೀಲನೆಯಾಗಿರಬೇಕು.
- ಗುಂಪಿಗೆ ಸಾಲವನ್ನು ಬ್ಯಾಂಕ್ ಅಧಿಕಾರಿಗಳು ಪರಿಶೀಲಿಸಿ ಗುಂಪು ಸಾಲಕ್ಕೆ ಮಾತ್ರವಲ್ಲ ಸದಸ್ಯರ ಏಳಿಗೆಗೆ ಶ್ರಮ ಪಡುತ್ತಿದೆಯೆಂದು ಮನವರಿಕೆ ಆದ ಮೇಲೆ ಮಾತ್ರ ಕೊಡಬಲ್ಲರು.
- ಗುಂಪು ಸಾಲ ಕೇಳಿದ ಬ್ಯಾಂಕ್‌ನಲ್ಲಿ ತನ್ನ ಉಳಿತಾಯ ಖಾತೆಯನ್ನು ತೆರೆದಿರಬೇಕು. ಈ ಖಾತೆಯು ಗುಂಪಿನ ಹೆಸರಿನಲ್ಲಿರಬೇಕು.
- ಬ್ಯಾಂಕ್ ಸಾಲ ಪಡೆಯಲು ಗುಂಪು ತನ್ನೆಲ್ಲಾ ಉಳಿತಾಯದ ಮೊತ್ತವನ್ನು ಬ್ಯಾಂಕಿನಲ್ಲಿಡುವ ಅಗತ್ಯವಿಲ್ಲ ಹಾಗೂ ಬೇರೆ ಜಾಮೀನು ಕೊಡಬೇಕಾಗಿಲ್ಲ.

ಗುಂಪುಗಳಿಗೆ ಪ್ರೋತ್ಸಾಹ ಧನ:

ಸ್ತ್ರೀ ಶಕ್ತಿ ಗುಂಪಿನ ಸದಸ್ಯರಿಗೆ ಉಳಿತಾಯ ಮನೋಭಾವನೆ ಬೆಳೆಸಲು ಹೆಚ್ಚು ಉಳಿತಾಯ ಮಾಡಿದ ಗುಂಪುಗಳಿಗೆ ನಗದು ರೂಪದಲ್ಲಿ ಪ್ರೋತ್ಸಾಹ ಧನವನ್ನು ನೀಡಲಾಗುತ್ತದೆ. ರೂ ೭೫.೦೦೦–೧.೦೦.೦೦೦ ರೆಗೆ ಉಳಿತಾಯ ಮಾಡಿದ ಗುಂಪಿಗೆ ೧೫.೦೦೦ ಹಾಗೂ ೧.೦೦.೦೦೦ ಕ್ಕೂ ಮೇಲ್ಪಟ್ಟು ಉಳಿತಾಯ ಮಾಡಿದ ಗುಂಪಿಗೆ ೨೦.೦೦೦ ಪ್ರೋತ್ಸಾಹ ಧನ ನೀಡುವುದು

ಅಂಗನವಾಡಿ ಕಾರ್ಯಕರ್ತೆಯರ ಜವಾಬ್ದಾರಿ:

ಸರಕಾರದ ನಿಯಮದ ಪ್ರಕಾರ ಅಂಗನವಾಡಿ ಕಾರ್ಯಕರ್ತೆಯರು ಹಳ್ಳಿಗಳಲ್ಲಿ ಸ್ತ್ರೀ ಶಕ್ತಿ ಗುಂಪು ರಚಿಸುವುದು ಕಡ್ಡಾಯವಾಗಿದ್ದು, ಟಾರ್ಗೇಟ್ ನಿಗದಿಯಾಗಿರುತ್ತದೆ. ಅಂದರೆ

ಪ್ರತಿಯೊಬ್ಬರು ಕನಿಷ್ಟ ೩ ಗುಂಪುಗಳನ್ನಾದರೂ ಮಾಡಬೇಕಾಗಿದೆ. ಇಲ್ಲ ಒಬ್ಬೊಬ್ಬ ಕಾರ್ಯಕರ್ತೆ ೧–೯ ಸ್ತ್ರೀ ಶಕ್ತಿ ಗುಂಪುಗಳನ್ನು ರಚಿಸಿರುವುದಾಗಿ ತಿಳಿಸಿದ್ದಾರೆ. ಸ್ತ್ರೀ ಶಕ್ತಿ ಗುಂಪುಗಳ ಕೆಲಸ ಅನಿವಾರ್ಯವಾಗಿರುವುದರಿಂದ ಕಾರ್ಯಕರ್ತೆಯರ ಜವಾಬ್ದಾರಿಯು ಜಾಸ್ತಿಯಾಗಿದೆ.

ಆಧಾರ ಗ್ರಂಥಗಳು

ಆಧಾರ ಗ್ರಂಥಗಳು:

೧. ಭಾರತದಲ್ಲಿ ಗ್ರಾಮೀಣ ಅಭಿವೃದ್ಧಿ ಚ.ನ ಶಂಕರ್‌ರಾವ್, ಬಿ ಎ ೫ ನೇಯ ಸೆಮಿಸ್ಟರ್ ಪುಟ ಸಂಖ್ಯೆ ೧೭೦

೨. ಅಂಗನವಾಡಿ ಕೇಂದ್ರಗಳು ಗ್ರಾಮೀಣ ಅಭಿವೃದ್ಧಿ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ ಜನಾರ್ದನ್ ಪುಟ ಸಂಖ್ಯೆ ೧೭

೩. ಸ್ತ್ರೀ ಶಕ್ತಿ ಸ್ವ-ಸಹಾಯ ಗುಂಪುಗಳ ಹಣಕಾಸು ಮತ್ತು ನಿರ್ವಹಣಾ ವ್ಯವಸ್ಥೆಗಳ ಕೈಪಿಡಿ

೪. ಸಮಗ್ರ ಸಮಾಜಶಾಸ್ತ್ರ ಚ.ನ ಶಂಕರ್‌ರಾವ್.

೫. ಭಾರತದ ಗ್ರಾಮೀಣ ಅಭಿವೃದ್ಧಿ- ಬಿ ಎ ಐದನೆಯ ಸೆಮಿಸ್ಟರ್ ಎಸ್.ಬಿ.ಹಿರೇಮಠ-೧೭೧

೬. ಸ್ಪರ್ಧಾ ಸ್ಫೂರ್ತಿ ಜನೆವರಿ ೨೦೧೨ ಪುಟ ಸಂಖ್ಯೆ ೪೯

೭. ನಿರಂತರ ಜುಲೈ ೨೦೧೧ ಪುಟ ಸಂಖ್ಯೆ ೯

೮. ವಿಜಯ ಕರ್ನಾಟಕ ಮಾರ್ಚ ೮ ೨೦೧೨.